



ಮಾರ್ಚ್ - 2013



# ಅಪರಂಜಿ

ತಿಳಿನಗೆಯ ಕಾರಂಜಿ







ಸಂಪುಟ 30

ಸಂಚಿಕೆ – 6

ಮಾರ್ಚ್ – 2013



ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಟ್ರಸ್ಟಿಗಳು
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

ವಿಶೇಷ ಆಹ್ವಾನಿತರು
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/–
ವಾರ್ಷಿಕ ಚಂದಾ: ರೂ. 100/–
ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಬಾಗಿಲಲ್ಲಿ ನಿಂತ ವಿಷ್ಣು | **ವತ್ಸಸ** | 3 |
| ದೇವರೇ ಗತಿ | **ಅ ರಾ ಮಿತ್ರ** | 9 |
| ಹನುಮಾವತಾರ | **ಎನ್. ರಾಮನಾಥ್** | 11 |
| ದೇವರಂತಹ ಗಂಡ | **ಸಿ.ಆರ್. ಸತ್ಯ** | 13 |
| ದೇವರ ಕಥೆ ಹೀಗಾಯಿತು | **ಡಾ. ಸಿದ್ಧಲಿಂಗಯ್ಯ** | 16 |
| ಸಂಕಟದಲ್ಲಿ..... | **ಕೃಷ್ಣ ಸುಬ್ಬರಾವ್** | 18 |
| ಶ್ರೀ ಗಣೇಶಾಯ ನಮಃ | **ಪಾ.ವೆಂ. ಆಚಾರ್ಯ** | 20 |
| ನೀ ಮಾಯೆಯೊಳಗೋ.. | **ಜೋಗಿ** | 24 |
| ತುಂತುರು | **ದಂನಾ** | 26 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 27 |
| ಪ್ರಶಸ್ತಿ ಲಾಸ್ಟ್ ಅಂಡ್... | **ಪ್ರಶಾಂತ ಅಡೂರ** | 29 |
| ದೇವರ ಕೆಲಸ | **ಇ.ಆರ್. ರಾಮಚಂದ್ರನ್** | 31 |
| ದೇವಾಯಣ | **ಆನಂದ** | 35 |
| ಶ್ರೀನಿವಾಸನ್‌ರ.... | **ಡಾ. ಡಿ.ವಿ. ಗುರುಪ್ರಸಾದ್** | 37 |


**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ದೇವರಿಗೆ ಅವಮಾನ ಮಾಡಿದರೆ ಕಠಿಣ ಕ್ರಮ – ಮಾನ್ಯ ಮಂತ್ರಿಗಳು

**● ಭಗವಂತ 'ಅಸಂಗೋಹಂ' ಎಂದು ನಕ್ಕನಂತೆ !!**

★★★

'ಬೊಕ್ಕಸ ಬರಿದು ಮಾಡುವ ಮಹಾ ಪಿತೂರಿ' ಎಂದರೇನು ಅಂತ ನಮ್ಮ ಓದುಗರೊಬ್ಬರು ಕೇಳಿದ್ದಾರೆ.

★★★

ನಷ್ಟದ ಸುಳಿಯಲ್ಲಿ ಕೆ.ಎಂ.ಎಫ್. – ಸುದ್ದಿ

ಹಾಲಿನ ದರ ಏರಿಕೆ – ಸುದ್ದಿ

**● ಹಾಲಾಹಲ ಎಂದರೇನು ಎಂದು ಅರ್ಥವಾಯಿತು !!**

★★★

ಸಕ್ಕರೆ ಕಾರ್ಖಾನೆಯಲ್ಲಿ 14 ಕನ್ನಡಿಗರ ವಜಾ – ಪತ್ರಿಕೆ

**● ಕಹಿ ಸುದ್ದಿ !!**

★★★

ಕೊನೆಗೂ ಬಂದವು ರಷ್ಯಾ ರಣಹದ್ದುಗಳು – ಪತ್ರಿಕೆ

**● ಹೆದರಬೇಡಿ AIR SHOW ಸುದ್ದಿ ಅಷ್ಟೆ !!**

★★★

ಒಂದು ರೂಪಾಯಿಯಲ್ಲಿ ಎಷ್ಟು ಜಮೆ ಎಷ್ಟು ಖರ್ಚು – ಬಜೆಟ್ ಸುದ್ದಿ

**● ಅಯ್ಯೋ, ಇವೆಲ್ಲ 'ಮಾಮೂಲು' ಬಿಡಿ !!**

★★★

ಇಂದಿನಿಂದ ಕೊಂಕಣಿ ಉತ್ಸವ – ಸುದ್ದಿ

**● ಮೈಲಾರದಿಂದ ಸ್ಪೆಷಲ್ ಬಸ್ ಓಡಿಸುತ್ತಾರಂತೆ !!**

★★★

ಮತ ಬ್ಯಾಂಕ್ ರಾಜಕೀಯಕ್ಕೆ ದೇಶ ಬಲಿ – ಶ್ರೀ ಮೋದಿ

**● Look who is talking ಅಂತ ಅಪರಂಜಿ ನಕ್ಕಳಂತೆ !!**

★★★



# ಬಾಗಿಲಲ್ಲಿ ನಿಂತ ವಿಷ್ಣು

**- ವತ್ಸನ**

**''ಈ** ಬಾರಿ ಚಳಿಯೇ ಇಲ್ಲದ ಚಳಿಗಾಲಾನ ನೋಡ್ತಾ ಇದೀವಿ. ಎಲ್ಲಕ್ಕೂ ಈ ಗ್ಲೋಬಲ್ ವಾರ್ಮಿಂಗೇ ಕಾರಣ ಏನಂತೀ?'' ಅಂತ ನಾನು ಶರಲೇಖನನ್ನು ಕೇಳಿದೆ. ಆ ಸಂಜೆ ನಾವಿಬ್ಬರೂ ನಮ್ಮ ಕಾಂಪ್ಲೆಕ್ಸಿನ ತುತ್ತ ತುದಿಯ ಟೆರೇಸಿನ ಮೇಲೆ ಕುಳಿತು ಹರಟುತ್ತಿದ್ದೆವು. ಅಮಾವಾಸ್ಯೆಯ ಕತ್ತಲಿದ್ದರೂ ಬೆಂಗಳೂರಿನ ಸಿಟಿ ಲೈಟುಗಳ ಪ್ರಯುಕ್ತ ಎಲ್ಲೋ ಅಲ್ಲೊಂದು ಇಲ್ಲೊಂದು ನಕ್ಷತ್ರಗಳು ಮಿನುಗುವುದನ್ನು ಮಾತ್ರ ಕಾಣಬಹುದಾಗಿತ್ತು.

''ಈ ಗ್ಲೋಬಲ್ ಗ್ಲೀಬಲ್ ವಾರ್ಮಿಂಗ್ ಬಗ್ಗೆ ಸುತರಾಂ ಏನೇನೂ ತಿಳೀದು ನನಗೆ. ನನ್ನ ಮಿದಿಳಿನಲ್ಲಿ ಇಂತಹ ಅನಗತ್ಯ ಮಾಹಿತಿಗಳಿಗೆ ಜಾಗವೇ ಇಲ್ಲ'' ಅಂತ ಖಡಾಖಂಡಿತವಾಗಿ ಹೇಳಿದ ನನ್ನ ಗೆಳೆಯ. ನನಗೆ ಸ್ವಲ್ಪ ರೇಗಿತು. ಏನೋ ಲೋಕಾಭಿರಾಮವಾಗಿ ಮಾತನಾಡುಕ್ಕೆ ಕುಳಿತರೆ ಅಗತ್ಯ, ಅನಗತ್ಯ ವಿಷಯಗಳ ಬಗ್ಗೆ ಮಾತನಾಡುತ್ತಲ್ಲಾ ಈ ವಿಚಿತ್ರ ಪ್ರಾಣಿ ಅಂತ ಅಂದುಕೊಂಡು, ''ಸರಿ ಹಾಗಾದ್ರೆ ನಿನ್ನ ಮಿದಿಳಿನಲ್ಲಿ ಜಾಗ ಇರೋ ವಿಷಯಾನೇ ಯಾವ್ದಾದ್ರೂ ಪ್ರಸ್ತಾಪಿಸು, ನಾನು ಅದಕ್ಕೆ ದನಿಗೂಡಿಸ್ತೇನೆ'' ಅಂತ ಹೇಳಿದೆ. ನನ್ನ ದನಿಯಲ್ಲಿದ್ದ ತೆಳು ಅಸಮಾಧಾನದ ಸೆಲೆಯನ್ನ ಶರಲೇಖ ಬೇಗ ಗುರುತಿಸಿದ. ''ಕೋಪಿಸ್ಕೋಬೇಡ ವತ್ಸನ, ನನ್ನ ಮಿದಿಳಿನ ಕಾರ್ಯವಿಧಾನಾನೇ ಈ ರೀತಿ. ನನ್ನಂತಹವರು ಜನಗಳ ಮಧ್ಯೆ ಇದ್ದು ಹರಟುಕ್ಕೆ ತೀರ ನಾಲಾಯಕ್ಕು. ಅದಿರಲಿ. ನನ್ನ ಆಸಕ್ತಿಯ ವಿಷಯದ ಬಗ್ಗೆ ಮಾತಾಡು ಅಂದೆಯಲ್ಲಾ. ಈಗ ಹೇಳು ಮಹೇಶ್ವರನಿಗೆ ತ್ರಿಶೂಲ, ವಿಷ್ಣುವಿಗೆ ಸುದರ್ಶನ ಚಕ್ರ ಇದ್ದುವಲ್ಲಾ ಬ್ರಹ್ಮನ ಬಳಿ ಇದ್ದ ಆಯುಧವಾದರೂ ಏನು?'' ಅಂತ ಕೇಳಿದ ಶರಲೇಖ. ಮಾತಿನ ವಿಷಯ ನಮ್ಮ ಪುರಾಣಗಳ ಕಡೆ ಒಮ್ಮೆಲೇ ತಿರುಗಿದ್ದು ನೋಡಿ ನನಗೆ ಆಶ್ಚರ್ಯವಾದರೂ ಅದನ್ನು ತೋರಿಸದೇ, ''ಬ್ರಹ್ಮನ ಅಸ್ತ್ರ ಎಲ್ಲಕ್ಕೂ ಮಿಗಿಲಾದ ಬ್ರಹ್ಮಾಸ್ತ್ರ. ಬ್ರಹ್ಮ ಸೃಷ್ಟಿಗೆ, ಧರ್ಮಕ್ಕೆ ಅಡ್ಡಿಬಂದ ವಿಘ್ನಗಳನ್ನೆಲ್ಲಾ ತೊಡೆದು ಹಾಕಲು ಈ ಅಸ್ತ್ರ ಉಪಯುಕ್ತ. ಈ ಅಸ್ತ್ರವನ್ನು ನಿಗ್ರಹಿಸಬೇಕಾದರೆ, ಉಪಶಮನಗೊಳಿಸಬೇಕಾದರೆ ಬ್ರಹ್ಮದಂಡಕ್ಕೆ ಮಾತ್ರ ಸಾಧ್ಯ. ಅದ್ಸರೀ, ಈಗ ಈ ಪ್ರಶ್ನೆ ಬಂದದ್ದಾದರೂ ಏಕೆ?'' ಅಂತ ಕೇಳಿದೆ. ಶರಲೇಖ ತಕ್ಷಣ

**ಚೆಕ್ಕುಗಳು ಮತ್ತು ಡಿಡಿಗಳು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿನಲ್ಲಿ ಇರಬೇಕು. ಸಂಪಾದಕರು ಉಪಸಂಪಾದಕರ ಹೆಸರಿನಲ್ಲಿ ಇರಬಾರದು.**

ಉತ್ತರಿಸಲಿಲ್ಲ. ಆಮೇಲೆ ಹೇಳಲು ಪ್ರಾರಂಭಿಸಿದ. ''ಭಾರತ ಸರ್ಕಾರದ ಪುರಾತತ್ವ ಸಂಶೋಧನಾ ಇಲಾಖೆಯ ನಿರ್ದೇಶಕ ಅರುಣ್ ಘೋಷ್ ನನ್ನ ಮುಂದೆ ಒಂದು ಸಮಸ್ಯೆ ಇಟ್ಟಿದ್ದಾರೆ. ನಾನು ಯಾವುದೇ ಪತ್ತೇದಾರಿ ಕೆಲಸವನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ನಿನ್ನ ಭಾಗವಹಿಸುವಿಕೆಗೆ ಒಪ್ಪಿಗೆ ಪಡೆದೇ ಮುಂದುವರಿಸುವುದು. ಹಾಗಾಗಿ ಅವರನ್ನು ಈ ಬಗ್ಗೆ ಕೇಳಿದೆ. ಅವರಿನ್ನೂ ಒಪ್ಪಿಗೆ ಕೊಟ್ಟಿಲ್ಲ. ಹಾಗಾಗಿ ಈಗ ನಿನಗೆ ಅವರ ಕೇಸಿನ ಬಗ್ಗೆ ಈ ಹಂತದಲ್ಲಿ ಹೇಳುವುದು ಸರಿಯಲ್ಲ. ಅವರ ಕೇಸಿನ ಪ್ರಯುಕ್ತ ನಾವು ಕಾಂಬೋಡಿಯಾಗೆ ಹೋಗಬೇಕಾಗಬಹುದು. ನಿನಗೆ ಬರುಕ್ಕಾಗುತ್ತೆ ತಾನೇ?''

''ಯಾವಾಗ ಹೋಗಬೇಕಾಗುತ್ತೆ?'' ಅಂತ ಕೇಳಿದೆ.

''ನಾಡಿದ್ದು.''

''ಅರರೇ, ಇನ್ನು ಹತ್ತು ದಿನ ನಾನು ಬೆಂಗಳೂರಿನಲ್ಲೇ ಇರಬೇಕಲ್ಲೋ ಮುಂದಿನ ಸೋಮವಾರ ನನ್ನ ತಂಗಿಯ ಮಗಳ ಮದುವೆ. ಹೆಣ್ಣನ್ನ ಹಸೆಮಣೆಗೆ ಕರೆತರಲು ನಾನು ಇರಲೇ ಬೇಕಾಗುತ್ತೆ. ಮದುವೆ ಮುಗಿದ ತಕ್ಷಣ ನಾನು ಎಲ್ಲಿಗಾದರೂ ಬರುಕ್ಕೆ ಸಿದ್ಧ'' ಅಂತ ಹೇಳಿದೆ.

ಶರಲೇಖನಿಗೆ ನಿರಾಶೆ ಆಗಿದ್ದು ಸ್ಪಷ್ಟವಾಗಿತ್ತು. ''ಸರಿ ಬಿಡು. ನಾನು ಒಬ್ಬನೇ ಹೋಗಿ ಬರುತ್ತೇನೆ. ಇನ್ನು ಹತ್ತು ದಿನಗಳ ನಂತರವೂ ನನ್ನ ಕೆಲಸ ಮುಂದುವರಿದಿದ್ದರೆ ನಿನಗೆ ತಿಳಿಸುವೆ. ತಕ್ಷಣ ಬಂದು ಬಿಡು. ಪಾಸ್‌ಪೋರ್ಟ್ ಇದೇ ತಾನೇ?''

''ಪಾಸ್‌ಪೋರ್ಟ್ ಇದೆ. ವೀಸಾ ಮಾಡಿಸ್ಬೇಕು. ಎಷ್ಟು ಟೈಮ್ ಬೇಕಾಗುತ್ತೋ ಅದಕ್ಕೆ?''

''ಅದೇನೂ ಯೋಚನೆ ಬೇಡ. ಅಲ್ಲಿಗೆ ಬಂದು ಇಳಿದಾಗ ವೀಸಾ ಪಡೆಯಬಹುದು'' ಅಂದ ಶರಲೇಖ. ಅಷ್ಟು ಹೊತ್ತಿಗೆ ಊಟದ ವೇಳೆ ಆಗಿದ್ದರಿಂದ ನಾವು ನಮ್ಮ ಫ್ಲಾಟಿಗೆ ಹಿಂತಿರುಗಿದೆವು.

ಮದುವೆ ಎಲ್ಲಾ ಸಾಂಗವಾಗಿ ನೆರವೇರಿತು. ಮಾರನೆಯ ದಿನ ಶರಲೇಖನ ಫೋನ್ ಕಾಲ್. ''ನಾಳೇನೇ ಸಿಯೆಮ್ ರೀಪ್‌ಗೆ ಬಂದುಬಿಡು. ಟಿಕೆಟ್ ಕಳಿಸಿದ್ದೇನೆ. ಏರ್‌ಪೋರ್ಟ್‌ನಲ್ಲಿ ನಿನ್ನನ್ನ ಇದಿರುಗೊಳ್ಳಲು ನಾನೇ ಇರುತ್ತೇನೆ. ಮೊಬೈಲ್ ತರುವಾಗ ಛಾರ್ಜರ್ ತರುವುದು ಮರೆಯಬೇಡ''ಎಂದ ಶರಲೇಖ.

ಸಿಯೆಮ್ ರೀಪ್ ವಿಮಾನ ನಿಲ್ದಾಣದಲ್ಲಿ ಶರಲೇಖ ನನ್ನನ್ನು ಇದಿರುಗೊಂಡ. ನಮ್ಮ ಆಟೋರಿಕ್ಷಾವನ್ನು ಹೋಲುವ ಮೋಟಾರ್ ಸೈಕಲ್ ಗಾಡಿಯೊಂದರಲ್ಲಿ ಕುಳಿತು (ಇಲ್ಲಿ ಅವನ್ನು ಟುಕ್ ಟುಕ್ ಎನ್ನುತ್ತಾರೆ) ನೇರವಾಗಿ ಹೋಟೆಲ್ಲಿಗೆ ಹೋದೆವು. ರೂಮು ಸೇರಿದ ಮೇಲೆ ಶರಲೇಖ ತನ್ನ ಮಾತನ್ನು ಪ್ರಾರಂಭಿಸಿದ.

''ಈ ದೇಶದ ಅತ್ಯಂತ ಖ್ಯಾತ ಪ್ರಾಚೀನ ಅವಶೇಷಗಳೆಂದರೆ ಆಂಖರ್ ವಾಟ್ ದೇವಾಲಯಗಳ ಸಮೂಹ. ಕ್ರಿಸ್ತಶಕ ಹನ್ನೆರಡನೆಯ ಶತಮಾನಗಳ ಸುಮಾರಿನಲ್ಲಿ ನಿರ್ಮಿಸಿದ ಈ ಭವ್ಯ ದೇವಾಲಯಗಳು ನಮ್ಮ ದೇಶದಿಂದ ಇಲ್ಲಿಗೆ ಬಂದು ರಾಜ್ಯ ಸ್ಥಾಪಿಸಿದ ಹಿಂದೂ

ರಾಜರುಗಳ ಕೊಡುಗೆ. ಇಮ್ಮಡಿ ಸೂರ್ಯವರ್ಮನ್ ಎಂಬ ರಾಜ ಕಟ್ಟಿದ ಈ ವಿಷ್ಣು ದೇವಾಲಯ ಇಡೀ ಜಗತ್ತಿನಲ್ಲೇ ಅತ್ಯಂತ ಹಿರಿದಾದ ಹಿಂದೂ ದೇವಾಲಯ ಸಮೂಹ ಎಂಬ ಖ್ಯಾತಿಗೆ ಪಾತ್ರವಾಗಿದೆ. ಸುಮಾರು ಮುನ್ನೂರು ವರ್ಷಗಳ ಕಾಲ ಹಿಂದೂ ರಾಜರುಗಳ ಆಳ್ವಿಕೆಯಲ್ಲಿ ಈ ಬೃಹತ್ ದೇವಾಲಯಗಳು ಹಿಂದೂ ಸಂಸ್ಕೃತಿಯ ಕುರುಹುಗಳಾಗಿ ಉಳಿದುಬಂದವು. ಅನಂತರ ಬೌದ್ಧ ರಾಜರುಗಳ ಆಳ್ವಿಕೆ ಪ್ರಾರಂಭವಾದಾಗ ಈ ದೇವಾಲಯಗಳಲ್ಲಿದ್ದ ಹಿಂದೂ ದೇವರುಗಳ ವಿಗ್ರಹಗಳನ್ನು ತೆಗೆದು ಅವುಗಳ ಜಾಗದಲ್ಲಿ ಭಗವಾನ್ ಬುದ್ಧನ ಪ್ರತಿಮೆಗಳನ್ನು ಅಳವಡಿಸುವ ಕಾರ್ಯ ಪ್ರಾರಂಭವಾಯಿತು. ಕಳೆದ ಹದಿನೈದು ದಿನಗಳಿಂದ ಅರುಣ್ ಘೋಷ್‌ರವರ ಜೊತೆಯಲ್ಲಿ ಇಲ್ಲೆಲ್ಲ ತಿರುಗಾಡಿದ್ದರೂ ಇನ್ನೂ ಎಲ್ಲ ದೇವಸ್ಥಾನಗಳನ್ನು ನೋಡಲಾಗಿಲ್ಲ. ವಾಸ್ತವವಾಗಿ ದೇವಸ್ಥಾನಗಳನ್ನೆಲ್ಲಾ ನೋಡುವುದಕ್ಕೆ ವ್ಯವಧಾನವೂ ಇಲ್ಲ ಅನ್ನು. ಏಕೆಂದರೆ ಇಲ್ಲಿಗೆ ನಾನು ಬಂದಿರೋದೇ ಒಂದು ಪುರಾತತ್ವ ಇಲಾಖೆಯ ಸಮಸ್ಯೆಯನ್ನು ಪರಿಹರಿಸೋದಕ್ಕೆ.''

``ಏನದು ಅವರ ಸಮಸ್ಯೆ? ಅದನ್ನು ಪರಿಹರಿಸುವ ಮಾರ್ಗದಲ್ಲಿ ಏನಾದರೂ ಕುರುಹುಗಳು ಕಂಡಿವೆಯೇ?'' ಅಂತ ನಾನು ಕೇಳಿದೆ.

``ಅದನ್ನೆಲ್ಲಾ ನಾಳೆ ಬೆಳಗ್ಗೆ ಆಂಖರ್ ವಾಟ್ ದೇವಸ್ಥಾನ ಸಮೂಹಕ್ಕೆ ಹೋದಾಗ ಅಲ್ಲೇ ತಿಳಿಸುವೆ. ಈಗ ನೀನು ಸ್ವಲ್ಪ ವಿರಮಿಸು. ಬೆಳಗ್ಗೆ ಆರಕ್ಕೇ ಘೋಷ್ ಬಂದು ನಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತಾರೆ'' ಅಂದ ಶರಲೇಖ.

ಮಾರನೆಯ ಬೆಳಗ್ಗೆ ಸೂರ್ಯೋದಯ ಸಮಯಕ್ಕೆ ಸರಿಯಾಗಿ ಆಂಖರ್ ವಾಟ್ ದೇವಾಲಯದ ಮುಂದೆ ನಾವಿದ್ದೆವು. ಅರುಣ್ ಘೋಷ್ ಅರವತ್ತು ದಾಟಿದ್ದರೂ ಅದಮ್ಯ ಚೈತನ್ಯದಿಂದ ತುಂಬಿದ್ದು ದಾರಿಯುದ್ದಕ್ಕೂ ಈ ದೇವಸ್ಥಾನಗಳ ಇತಿಹಾಸವನ್ನು ಹೇಳುತ್ತ ಬಂದಿದ್ದರು. ದೇವಸ್ಥಾನದ ಮುಂಬಾಗಿಲು ಪಶ್ಚಿಮ ದಿಕ್ಕಿಗೆ ಇದ್ದದ್ದರಿಂದ ಬೆಳಗಿನ ಸೂರ್ಯ ಕಿರಣಗಳು ದೇವಸ್ಥಾನದ ಹಿನ್ನೆಲೆಯಿಂದ ಪ್ರಕಾಶಿಸಿ ಒಂದು ಅಪೂರ್ವ ಅನುಭವವನ್ನು ನೀಡಿತು. ಘೋಷ್ ತಮ್ಮ ವಿವರಣೆಯನ್ನು ಮುಂದುವರಿಸಿದರು.

``ಈ ದೇವಾಲಯಕ್ಕೆ ಮೂರು ಮಹಾದ್ವಾರಗಳಿವೆ. ಮಧ್ಯೆ ಇರುವ ಮಹಾದ್ವಾರ, ಮಹಾರಾಜ ವೀರವರ್ಮನ್‌ಗೆ ಮಾತ್ರ ಮೀಸಲಾಗಿತ್ತು. ದೇವಸ್ಥಾನದ ಬಲಗಡೆಯ ಸ್ವಲ್ಪ ಚಿಕ್ಕ ದ್ವಾರದಿಂದ ಮಂತ್ರಿಗಳು ಮತ್ತು ಇತರ ಅಧಿಕಾರಿಗಳು ದೇವಾಲಯವನ್ನು ಪ್ರವೇಶಿಸುತ್ತಿದ್ದರು. ಎಡಗಡೆಯ ದ್ವಾರವನ್ನು ಸಾಮಾನ್ಯ ಜನಗಳು ಬಳಸುತ್ತಿದ್ದರು. ಇಲ್ಲಿಂದ ನಾವು ದೇವಸ್ಥಾನದ ಬಳಿ ಹೋಗಬೇಕಾದರೆ ದೇವಸ್ಥಾನದ ಸುತ್ತ ಇರುವ ನೀರು ತುಂಬಿದ ಕಂದಕವನ್ನು ದಾಟಿ ಹೋಗಬೇಕು. ಇದನ್ನು ದಾಟಲು ನಿರ್ಮಿಸಿರುವ ಸೇತುವೆಯ ಎರಡೂ ಬದಿಗಳಲ್ಲಿರುವ ವಿಗ್ರಹಗಳನ್ನು ಸ್ವಲ್ಪ ಸೂಕ್ಷ್ಮವಾಗಿ ನೋಡಿ'' ಎಂದರು ಘೋಷ್.

ಸೇತುವೆಯ ಬಲಬದಿಯಲ್ಲಿ ದೇವತೆಗಳು ಸಾಲಾಗಿ ನಿಂತು ತಮ್ಮ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಒಂದು ದೈತ್ಯ ಸರ್ಪವನ್ನು ಎಳೆಯುತ್ತಿದ್ದರು. ಎಡಬದಿಯಲ್ಲಿ ಅಷ್ಟೇ ಸಂಖ್ಯೆಯ ದಾನವರು ಇನ್ನೊಂದು ದೈತ್ಯ ಸರ್ಪವನ್ನು ಎಳೆಯುತ್ತಿದ್ದುದು ಕಣ್ಣಿಗೆ ಬಿತ್ತು. ದೇವತೆಗಳ

ಮುಖಗಳಲ್ಲಿ ಸಾತ್ವಿಕ ಕಳೆ ಎದ್ದು ಕಾಣುವಂತಿದ್ದರೆ, ದಾನವರ ಮುಖಗಳಲ್ಲಿ ಕ್ರೌರ್ಯ, ದುರಾಶೆ ಎದ್ದು ಕಾಣುತ್ತಿತ್ತು. ಸಮುದ್ರ ಮಥನದ ಕಥೆಯನ್ನು ಚಿಕ್ಕವನಾಗಿದ್ದಾಗ ನಮ್ಮ ಗೌರ ಚಿಕ್ಕಮ್ಮನಿಂದ ಕೇಳಿದ್ದೆ. ಈಗ ಈ ದೂರದ ಯಶೋಧರಪುರದಲ್ಲಿ (ಆಗಿನ ಹೆಸರು) ಸಮುದ್ರ ಮಥನವನ್ನು ಪ್ರತ್ಯಕ್ಷವಾಗಿ ನೋಡುವ ಅವಕಾಶ ದೊರಕಿತ್ತು. ಸೇತುವೆಯನ್ನು ಹಾದು ಈಗ ನಾವು ದೇವಸ್ಥಾನದ ಮುಖ್ಯದ್ವಾರದ ಮುಂದೆ ನಿಂತಿದ್ದೆವು. ಅನೇಕ ಪ್ರವಾಸಿಗರು ಮುಖ್ಯದ್ವಾರದ ಮೂಲಕ ಹಾದು ಹೋಗುತ್ತಿದ್ದುದನ್ನು ನೋಡಿ ನಾನೂ ಅವರುಗಳನ್ನು ಹಿಂಬಾಲಿಸಿದೆ.

''ಆ ದ್ವಾರ ಬೇಡ. ದಯವಿಟ್ಟು ನನ್ನೊಡನೆ ಬನ್ನಿ. ಈ ಎಡ ದ್ವಾರದ ಮೂಲಕ ಹಾದು ಹೋಗೋಣ'' ಎಂದರು ಘೋಷ್. ನಾವಿಬ್ಬರೂ ಅವರನ್ನು ಹಿಂಬಾಲಿಸಿದೆವು. ಸುಮಾರು ಇಪ್ಪತ್ತು ಮೆಟ್ಟಲುಗಳನ್ನು ಹತ್ತಿ ಎಡದ್ವಾರದ ಮಂಟಪದೊಳಗೆ ನಿಂತಾಗ ನನಗೊಂದು ಆಶ್ಚರ್ಯ ಕಾದಿತ್ತು. ನಾವು ನಡೆಯಬೇಕಾದ ಹಾದಿಗೆ ಅಡ್ಡಲಾಗಿ ಒಂದು ಅತಿ ಭವ್ಯವಾದ ಸುಮಾರು ಮೂವತ್ತು ಅಡಿ ಎತ್ತರದ ಶ್ರೀಮನ್ಮಹಾವಿಷ್ಣುವಿನ ವಿಗ್ರಹ ನಿಂತಿತ್ತು. ಪೀತಾಂಬರಗಳನ್ನುಟ್ಟಿದ್ದ ಈ ವಿಷ್ಣು ವಿಗ್ರಹದ ಮುಂದೆ ಎಲ್ಲ ಪೂಜಾ ಸಾಮಗ್ರಿಗಳೂ ಅಣಿಯಾಗಿ ಇಟ್ಟಿತ್ತು. ಹಲವು ಭಕ್ತರು ವಿಗ್ರಹದ ಮುಂದೆ ಕುಳಿತಿದ್ದರು. ಕಾಂಬೋಡಿಯನ್ ಅರ್ಚಕನೊಬ್ಬ ಮಂತ್ರ ಪಠಣ ಮಾಡುತ್ತಾ ಪೂಜಾವಿಧಿಗಳನ್ನು ನಡೆಸುತ್ತಿದ್ದ. ಘೋಷ್‌ರವರೊಂದಿಗೆ ನಾವಿಬ್ಬರೂ ಒಂದು ಮೂಲೆಗೆ ಸರಿದು ನಿಂತೆವು. ಘೋಷ್ ನಮ್ಮನ್ನು ಕುರಿತು ಮೆಲುದನಿಯಲ್ಲಿ, ''ಮಹಾರಾಜ ವೀರವರ್ಮನ್ ಪೂಜೆ ಮಾಡುತ್ತಿದ್ದ ಶ್ರೀಮನ್ಮಹಾವಿಷ್ಣು ಇದು. ದೇವಸ್ಥಾನದ ಮಧ್ಯಭಾಗದಲ್ಲಿರುವ ಮಹಾಗೋಪುರದ ಗರ್ಭಗುಡಿಯಲ್ಲಿ ವೀರವರ್ಮನ್‌ನಿಂದ ಪ್ರತಿಷ್ಠಾಪನೆಯಾಗಿ, ಸುಮಾರು ಮೂನ್ನೂರು ವರ್ಷಗಳ ಕಾಲ ಆ ಮಹಾಗೋಪುರದ ಗರ್ಭಗುಡಿಯಲ್ಲಿ ಮಹಾರಾಜರು ಸಲ್ಲಿಸಿದ ಪೂಜೆಯನ್ನು ಸ್ವೀಕರಿಸಿದ ಈ ವಿಗ್ರಹ ಬೌದ್ಧರ ಆಳ್ವಿಕೆಯ ಸಮಯದಲ್ಲಿ ತನ್ನ ಜಾಗದಿಂದ ಉಚ್ಚಾಟನೆಗೊಂಡು ಇಲ್ಲಿ ಈ ದ್ವಾರ ಮಂಟಪದಲ್ಲಿ ಬಂದು ನಿಲ್ಲಬೇಕಾಯಿತು. ಈಗ ಆ ಮಹಾಗೋಪುರದ ಗರ್ಭಗುಡಿಯಲ್ಲಿ ಇದೇ ಎತ್ತರದ ಭಗವಾನ್ ಬುದ್ಧನ ಪ್ರತಿಮೆ ಪ್ರತಿಷ್ಠಾಪನೆಯಾಗಿದ್ದು ಅಲ್ಲಿಂದ ಆ ಮಹಾಕರುಣ ಎಲ್ಲ ಭಕ್ತರನ್ನೂ ಆಶೀರ್ವದಿಸುತ್ತಿದ್ದಾನೆ. ವಿಷ್ಣು ಮತ್ತು ಬುದ್ಧ ಇಬ್ಬರ ಇರುವಿಕೆಯಿಂದ ಪುನೀತವಾಗಿರುವ ಪವಿತ್ರ ಕ್ಷೇತ್ರವಿದು'' ಎಂದರು.

ಇಷ್ಟು ಹೊತ್ತೂ ಶರಲೇಖ ಏನನ್ನೂ ಮಾತನಾಡದೇ ಸುಮ್ಮನಿದ್ದ. ಈಗ ಅವನು ನನ್ನನ್ನು ಕುರಿತು. ''ಮಹಾವಿಷ್ಣುವಿನ ಕೈಗಳನ್ನು ಸೂಕ್ಷ್ಮವಾಗಿ ಗಮನಿಸಿ ಏನಾದರೂ ವಿಚಿತ್ರ ಕಂಡರೆ ಹೇಳು'' ಎಂದ. ನಾನು ವಿಷ್ಣುವಿನ ನಾಲ್ಕೂ ಕೈಗಳನ್ನು ಪರಿಶೀಲಿಸಿದೆ. ಮುಂದಿನ ಎರಡು ಕೈಗಳಲ್ಲಿ ಗದೆ ಮತ್ತು ಪದ್ಮಗಳು ಬಹು ಸುಂದರವಾಗಿ ಕೆತ್ತಲ್ಪಟ್ಟಿದ್ದವು. ಹಿಂದಿನ ಎಡಗೈ ಶಂಖವನ್ನು ಹಿಡಿದಿತ್ತು. ನಿಧಾನವಾಗಿ ನಾನು ಹಿಂದಿನ ಬಲಗೈ ಕಡೆ ದೃಷ್ಟಿ ಹಾಯಿಸಿದೆ. ಬಲಗೈ ಮಣಿಕಟ್ಟಿನ ಹತ್ತಿರ ಮುರಿದಿತ್ತು. ಚಕ್ರದ ಸುಳಿವೇ ಇರಲಿಲ್ಲ. ಇದನ್ನು ಶರಲೇಖನಿಗೆ

ಪಿಸುಗುಟ್ಟಿದೆ. ಆತ ನಸುನಕ್ಕು ತಲೆಯಾಡಿಸಿದ ಅನಂತರ ನಾವು ಮಹಾವಿಷ್ಣುವನ್ನು ಬಲಬದಿಯಿಂದ ಹಾದು ಆಂಖರ್ ವಾಟ್ ದೇವಸ್ಥಾನದ ಮುಖ್ಯ ಪ್ರಾಕಾರವನ್ನು ಪ್ರವೇಶಿಸಿದೆವು. ಸುಮಾರು ಒಂದು ಘಂಟೆಯ ಕಾಲ ಘೋಷ್‌ರವರು ನಮಗೆ ದೇವಸ್ಥಾನದ ಸಮಗ್ರ ಚರಿತ್ರೆಯನ್ನು ವಿವರಿಸಿದರು. ಮೂರು ಅಂತಸ್ತುಗಳ ಈ ಭವ್ಯ ದೇವಾಲಯದ ಭಿತ್ತಿ ಚಿತ್ರಗಳು ನಮ್ಮ ಮನಸ್ಸನ್ನು ಸೂರೆಗೊಂಡವು. ಅನಂತರ ದೇವಸ್ಥಾನದ ಪೂರ್ವದ್ವಾರದಿಂದ ಹೊರಬಿದ್ದಾಗ ನಮ್ಮ ಟುಕ್ ಟುಕ್ ಅಲ್ಲಿ ನಮಗಾಗಿ ಕಾಯುತ್ತಿತ್ತು. ಗಾಡಿಯಲ್ಲಿ ಕುಳಿತು ಹೊರಟಾಗ ಘೋಷ್ ಪ್ರಾರಂಭಿಸಿದರು. ''ಸಾಮಾನ್ಯವಾಗಿ ಆಂಖರ್ ವಾಟ್ ದರ್ಶನವನ್ನು ಮುಗಿಸಿದ ನಂತರ ಆಂಖರ್ ತಾಮ್ ಎಂಬ ದೇವಸ್ಥಾನಗಳ ಸಮೂಹವನ್ನು ನೋಡಲು ಹೋಗುವುದು ವಾಡಿಕೆ. ಆದರೆ ಶರಲೇಖ ಅವರು ತಾ ಪ್ರಾಹ್ಮ್ ಎಂಬ ದೇವಾಲಯವನ್ನು ನೋಡಬಯಸಿರುವುದರಿಂದ ಈಗ ಅಲ್ಲಿಗೆ ಹೊರಟಿದ್ದೇವೆ.''

ಶರಲೇಖ ಮಧ್ಯೆ ಪ್ರವೇಶಿಸಿದ. ''ಘೋಷ್ ತಮಾಷೆ ಮಾಡುತ್ತಿದ್ದಾರೆ. ನಾವು ಈಗ ಹೋಗುತ್ತಿರುವ ಜಾಗ ತಾ ಪ್ರಾಹ್ಮ್‌ನ ಮೂಲನಾಮ ಪ್ರಾಚೀನ ಬ್ರಹ್ಮ. ಬ್ರಹ್ಮ ಎಂಬ ಸಂಸ್ಕೃತ ಪದ ಕಳೆದ ಸಾವಿರ ವರ್ಷಗಳಲ್ಲಿ ಪ್ರಾಹ್ಮ್ ಎಂದು ಬದಲಾಗಿದೆ. ಘೋಷ್‌ರವರು ನನ್ನನ್ನು ಇಲ್ಲಿಗೆ ಕರೆಸಿಕೊಂಡಿರುವ ಉದ್ದೇಶ ಶ್ರೀಮನ್ಮಹಾವಿಷ್ಣುವಿನ ವಿಗ್ರಹದಲ್ಲಿನ ಚಕ್ರವನ್ನು ಹುಡುಕುವುದಕ್ಕಾದರೆ ಹುಡುಕಿ ವಿಗ್ರಹವನ್ನು ಪೂರ್ಣಗೊಳಿಸುವುದು. ಈ ಸಮಸ್ಯೆಯನ್ನು ಘೋಷ್ ನನಗೆ ಹೇಳಿದಾಗ ಇದೊಂದು ಅಸಾಧ್ಯವಾದ ಕೆಲಸ ಎನ್ನಿಸಿತು. ಸಾವಿರಾರು ವರ್ಷಗಳ ಹಿಂದೆ ಕಳುವಾದ ಚಕ್ರ ಇನ್ನೂ ಈ ಪ್ರದೇಶದಲ್ಲೇ ಇರುತ್ತದೆಯೇ? ಇದ್ದರೂ ಹುಲ್ಲಿನ ಮೆದೆಯಲ್ಲಿ ಸೂಜಿ ಹುಡುಕಿದಂತಾಗುವುದಿಲ್ಲವೇ? ಎಂಬೆಲ್ಲ ಸಂಶಯಗಳು ಕಾಡಿದವು. ಅವರ ಮೇಲಿನ ಗೌರವದಿಂದ ನನ್ನ ಕೈಲಾದಷ್ಟು ಮಾಡುವ ಉದ್ದೇಶದಿಂದ ಇಲ್ಲಿಗೆ ಬಂದೆ. ಏನೋ ಒಂದು ಹೊಳೆಯಿತು. ಕಳೆದ ಮೂರುದಿನಗಳಿಂದ ಆ ಹೊಳಹಿನ ಬೆನ್ನು ಹಿಡಿದು ನಾವಿಬ್ಬರೂ ಓಡಾಡಿದೆವು. ನಮ್ಮ ಅದೃಷ್ಟದಿಂದಲೋ ಭಗವಂತನ ಕರುಣೆಯಿಂದಲೋ ನಮಗೆ ಯಶಸ್ಸು ದೊರಕುವ ಸೂಚನೆ ದೊರೆತಾಗ ಇಂತಹ ಒಂದು ಮಹತ್ವದ ಸಮಸ್ಯಾ ಪರಿಹಾರದಲ್ಲಿ ನನ್ನ ಅಂಕಣಕಾರ ಇಲ್ಲದಿದ್ದರೆ ಹೇಗೆ ಅಂತ ನಿನ್ನನ್ನು ಬರಹೇಳಿದೆ. ನಮ್ಮ ಸಮಸ್ಯಾ ಪರಿಹಾರದ ಕೊನೆಯ ಹೆಜ್ಜೆ ಈಗ ಬ್ರಹ್ಮ ದೇಗುಲದಲ್ಲಿ'' ಎಂದ ಶರಲೇಖ. ನನಗಂತೂ ಅವನ ಮಾತಿನ ತಲೆಬುಡ ತಿಳಿಯಲಿಲ್ಲ.

ನಮ್ಮ ಗಾಡಿ ತಾ ಪ್ರಾಹ್ಮ್‌ನ ಹೊರದ್ವಾರದಲ್ಲಿ ನಿಂತಿತು. ಬ್ರಹ್ಮ ದೇಗುಲದ ಒಳಗೆ ನಡೆದೆವು. ಐನೂರು ಆರುನೂರು ವರ್ಷಗಳ ದೈತ್ಯ ಅಶ್ವತ್ಥ ವೃಕ್ಷಗಳು ಮಾನವ ನಿರ್ಮಿತ ಕಲ್ಲಿನ ದೇಗುಲಗಳನ್ನು ತಮ್ಮ ಬೃಹತ್ ಬೇರುಗಳಿಂದ ಕಿವುಚಿ ಪುಡಿಮಾಡುತ್ತಿರುವ ದೃಶ್ಯವನ್ನು ನೋಡಿದೆವು.

ದೇಗುಲಗಳ ಸೂರಿನ ಮೇಲೆ ಸಸಿಯಾಗಿ ಬೆಳೆದು ತನ್ನ ಬೇರುಗಳನ್ನು ನೆಲಕ್ಕೆ ಊರಿ ಅನಂತರ ನೂರಾರು ವರ್ಷಗಳ ಅವಧಿಯಲ್ಲಿ ಇಡೀ ದೇಗುಲವನ್ನು ತನ್ನ ಬೇರಿನ ಬಂಧನದಲ್ಲಿ ಬಿಗಿದು ಜೀರ್ಣಿಸಿಕೊಳ್ಳುವ ಭಯಾನಕ ದೃಶ್ಯ ಅದು. ಘೋಷ್ ಮತ್ತು

ಶರಲೇಖ ಏಕಾಗ್ರತೆಯಿಂದ ಒಂದು ನಿರ್ದಿಷ್ಟ ದೇಗುಲದತ್ತ ನಡೆಯುತ್ತಿದ್ದರು. ಕೊನೆಗೆ ನಮ್ಮ ಗುರಿ ನಮ್ಮ ಕಣ್ಣ ಮುಂದಿತ್ತು. ಬೇರುಗಳ ಸಂದಿಯಲ್ಲಿದ್ದ ಗುಡಿಯ ದ್ವಾರವನ್ನು ಪ್ರವೇಶಿಸಿದೆವು. ಘೋಷ್‌ರವರ ಅಧಿಕಾರಿಗಳು ನಮಗೆ ಮುಂಚೆಯೇ ಅಲ್ಲಿಗೆ ಬಂದು ನಮ್ಮ ಬರವನ್ನು ಕಾಯುತ್ತಿದ್ದರು. ಒಂದಿಬ್ಬರು ಕಾಂಬೋಡಿಯನ್ ಪೊಲೀಸರೂ ಅಲ್ಲಿದ್ದು ರಕ್ಷಣೆ ನೀಡುತ್ತಿದ್ದರು. ಈ ಗುಡಿಯ ಹಿಂಬದಿಯ ಗೋಡೆಯಿಂದ ಚಾಚಿನಿಂತ ಒಂದು ಬೇರಿನ ಕೆಳಗೆ ಚಕ್ರ ಹಿಡಿದಿದ್ದ ಕಲ್ಲಿನ ಕೈ ಕಂಡಿತು.



ಸಿಯೆಮ್ ರೀಪಿನಿಂದ ಹಿಂತಿರುಗುವಾಗ ಶರಲೇಖ ತನ್ನ ವಿವರಣೆ ನೀಡಿದ.

''ಬ್ರಹ್ಮ ದೇವನ ಆಯುಧ ಬ್ರಹ್ಮಾಸ್ತ್ರ ಅಂತ ನಾವಿಬ್ಬರೂ ಮಾತಾಡಿದ್ದ ನೆನಪಿರಬಹುದು. ಅಶ್ವತ್ಥ ವೃಕ್ಷ ಬ್ರಹ್ಮಾಂಡವನ್ನು ಪ್ರತಿನಿಧಿಸುವ ಪ್ರಸ್ತಾಪ ಗೀತೆಯಲ್ಲಿ ಬರುವುದನ್ನು ಓದಿದ್ದೆ. ವಿಷ್ಣುವಿನ ಆಯುಧವನ್ನು ಮುಟ್ಟುವ ಶಕ್ತಿ ಯಾರಿಗಾದರೂ ಇದ್ದಿದ್ದರೆ ಅದು ಬ್ರಹ್ಮನಿಗೆ ಮಾತ್ರವೇ ಎಂಬ ಭಾವನೆ ಹೊಳೆದಾಗ ನಮ್ಮ ಹುಡುಕಾಟವನ್ನು ಬ್ರಹ್ಮ ದೇಗುಲಕ್ಕೆ ಸೀಮಿತಗೊಳಿಸಿ ಇಲ್ಲಿ ಮಾತ್ರ ಹುಡುಕಿದೆವು. ಹುಡುಕಾಟ ನಮ್ಮದು. ಯಶಸ್ಸು ಭಗವಂತನದು'' ಎಂದ ಶರಲೇಖ. ''ಇಂತಹ ಆಧ್ಯಾತ್ಮದ ಕೇಸುಗಳನ್ನು ಬಿಟ್ಟು ಸಾಮಾನ್ಯ ಕೇಸುಗಳನ್ನು ನನ್ನ ಮಿತ್ರ ಪರಿಹರಿಸುವಂತಾಗಲಿ'' ಎಂದು ನಾನು ವಿಷ್ಣು ಮತ್ತು ಬುದ್ಧ ಇಬ್ಬರನ್ನೂ ಒಟ್ಟಿಗೆ ಪ್ರಾರ್ಥಿಸಿದೆ.

✤

---

ದೇವನಿಗೆ ಸಾವಿಲ್ಲ, ಹುಟ್ಟಿಲ್ಲ ಸತ್ತಿಲ್ಲ
ಅವಗೆ ಸಾವಿಲ್ಲದುದೆ ನಮ್ಮ ಸಾವು
ದೇವ ಸತ್ತಿದ್ದರೆ ಮತ್ತೆ ಹುಟ್ಟುತಲಿದ್ದ
ಸಾವಿಗಂಜಿದ ಹೇಡಿ ಕಲ್ಲಾದನೋ ತಿಂಮ

'ದೇವರು' ವಿಶೇಷ

# ದೇವರೇ ಗತಿ

- ಅ ರಾ ಮಿತ್ರ

**ಟೆ**ನಿಸನ್ ಕವಿ ಒಂದು ಕಡೆ

*God is in his heaven*
*All is well in the world*

ಎಂದಿದ್ದಾನೆ.

ಕುವೆಂಪು ಇದನ್ನು

ದೇವನಿಹನು ವ್ಯೋಮದಲ್ಲಿ
ಎಲ್ಲ ಕ್ಷೇಮ ಭೂಮಿಯಲ್ಲಿ

**ದೇವರ ಹೆಸರು ಎತ್ತದೆ ವ್ಯವಹಾರ ನಡೆಸುವವರಿಗೆ ವಂದನೆಗಳು**

ಎಂದು ಅನುವಾದಿಸಿದ್ದಾರೆ. ಇದಕ್ಕೆ ಸರಿಯಾದ ಅರ್ಥ ನನಗೆ ಹೊಳೆದಿದೆ. ಏನೆಂದರೆ ದೇವನಿಹನು ವ್ಯೋಮದಲ್ಲಿ ಅಂದರೆ ಆಕಾಶದಲ್ಲಿ ದೇವರಿದ್ದಾನೆ. ಸದ್ಯ ಕೆಳಗೆ ಇಳಿದು ಬಂದಿಲ್ಲ. ಆದುದರಿಂದ ಭೂಮಿಯಲ್ಲಿ ಎಲ್ಲರೂ ಕ್ಷೇಮ. ಇದು ನಾನು ಕಂಡುಕೊಂಡ ಅರ್ಥ. ಅಂದರೆ ಯಾರ ತಂಟೆಗೂ ಬರದೆ ಅವನು (ಅವಳು? ಅದು?) ಅಲ್ಲೇ ಇದ್ದರೆ ಒಳ್ಳೆಯದು ಎಂದಾಯಿತಲ್ಲವೆ? 'ತನ್ನ ಪಾಡಿಗೆ ತಾನು' ಎಂಬ ಮಾತಿನ ಬಳಕೆ ಇದನ್ನೇ ಸೂಚಿಸುತ್ತದಲ್ಲವೆ?

ಮನುಷ್ಯನ ವಿಚಾರದಲ್ಲಿ (ದೇವರಿದ್ದರೆ) ಅವನು ಏಕೆ ತಲೆ ಹಾಕಬೇಕು ಎಂಬುದು ನನಗೆ ಅರ್ಥವಾಗಿಲ್ಲ. ಅವನೇನು ಬಹುರಾಷ್ಟ್ರೀಯ ಕಂಪನಿಯ ಯಜಮಾನನೆ? ಆಗ ದೇವಸ್ಥಾನಗಳ ಹುಂಡಿಗಳು ಮೈತುಂಬಿಕೊಂಡಿರುವುದಕ್ಕೂ, ದೇವರುಗಳು ಸರ್ವಾವಯವ ಭೂಷಿತರಾಗಿರುವುದಕ್ಕೂ, ದೇವಪುತ್ರರೆಂದು ತಮ್ಮನ್ನು ತಾವು ತಿಳಿದಿರುವ ಶ್ರೀಮಂತ ಜನರೇ ಕಾರಣವಿರಬಹುದೆಂಬ ಊಹೆ ನನ್ನದು. ಆಧುನಿಕ ಯುಗಕ್ಕೆ ತಕ್ಕಂತೆ ಈಗಿನ ದೇವರುಗಳು ಡಾಲರ್ ಪ್ರೇಮಿಗಳೂ ಆಗಿರುವುದು ನಿಜ. ಬಡವರನ್ನು ಆ ದೇವರುಗಳು ಕೊಳೆತ ಕಿತ್ತಳೆಗಳೆಂದು ಭಾವಿಸಿರುವುದರಿಂದ ಅವರನ್ನು ಮೂಸುವುದೂ ಇಲ್ಲ! ಲೋಕಾದ್ಯಂತ ಲಕ್ಷ್ಮೀಪುತ್ರರನ್ನು ಹೊಂದಿರುವ ಆ ದೇವರು 'ಲಕ್ಷ್ಮೀಪತಿ'ಯಾಗಿದ್ದಾನೆಯೇ ಶಿವಾಯಿ (ಹೊರತು) ಬೇರೇ ಏನೂ ಆಗಿಲ್ಲ. ಆದರೂ ಪಾಪ ಬಡ ಜನರು ಹಳೆಯ ಅಭಿಮಾನದಿಂದ ಈಗಲೂ ಈತ ತಮ್ಮ ಬಂಧುವೆಂದೇ ಭಾವಿಸಿದ್ದಾರೆ. ಆದರೆ ಶ್ರೀಮಂತನನ್ನು 'ದೇವರ ಗೂಳಿ' ಎಂದು ಭಾವಿಸುತ್ತಾರೆ.

ಪುರಂದರದಾಸರ ಶ್ರೀಕೃಷ್ಣ ದೇವರು ತನ್ನ ಅಮ್ಮನಿಗೆ ನಾನು ಗಲಾಟೆ ಮಾಡುವುದಿಲ್ಲ. ದೇವರಂತೆ ಒಂದು ತಾವಿಲಿ (ಜಾಗದಲ್ಲಿ) ಕೂಡುವೆ ಎಂದು ಹೇಳಿದ್ದಾನಷ್ಟೆ. ಹಾಗೆ ಈಗಲೂ ಅವನು ಸುಮ್ಮನೆ ಕೂರಲು ಒಪ್ಪಿದರೆ ನನ್ನದೇನೂ ಆಭ್ಯಂತರವಿಲ್ಲ. ಆದರೆ ಅವನು ನಮ್ಮ

ತಂಟೆಗೆ ಬರುವುದು ನನಗೆ ಇಷ್ಟವಿಲ್ಲ. ಗುರುಜಾಡ ಅಪ್ಪಾರಾವೆಂಬ ತೆಲುಗು ಹಿರಿಯ ವಿದ್ವಾಂಸರು 'ಮನುಷ್ಯನಿಗೆ ಮುಕ್ತಿ ಮನುಷ್ಯನಿಂದಲೇ' ಎನ್ನುತ್ತಾರೆ. ಒಂದು ಘಟ್ಟದಲ್ಲಿ ಅವರು ದೇವರುನ್ನು ಸೃಷ್ಟಿ ಮಾಡಿದ್ದು ಕೂಡ ಮನುಷ್ಯನೇ ಅಲ್ಲವೆ? ಎಂಬ ವಿಚಿತ್ರ ಸತ್ಯವನ್ನೂ ಹೇಳುತ್ತಾರೆ.

ಕಮ್ಯೂನಿಸ್ಟ್ ದೇಶಗಳು ದೇವರನ್ನು ಕೈ ಬಿಟ್ಟು ಅತ್ಯುತ್ತಮ ಜೀವನ ಮೌಲ್ಯಗಳನ್ನು ಗುರುತಿಸಿಕೊಂಡಿಲ್ಲವೆ? ಅವನ ಹಸ್ತಕ್ಷೇಪವನ್ನು ತಪ್ಪಿಸಿ ತಾವೂ ಅವನ ತಂಟೆಗೆ ಹೋಗದೆ ಲಕ್ಷಣವಾಗಿ ಬದುಕಲಿಲ್ಲವೆ? ಲೋಕದಲ್ಲಿ ದೇವ, ಮನುಷ್ಯ, ತಿರ್ಯಕ್ (ಪ್ರಾಣಿ), ಸ್ಥಾವರ (ಜಡ) ಎಂಬ ನಾಲ್ಕು ಬಿಡಿ ಮಂದಿ ಇದ್ದಾರೆ ಎಂದು ಹೇಳುವ ಸಂಸ್ಕೃತ ಭಾಷೆ ಅವರನ್ನೆಲ್ಲ ಬೇರೆ ಬೇರೆ ಎಂದು ಭಾವಿಸಿಲ್ಲವೆ? ರೈತರು ಕೂಡ ಒಂದು ಅಳತೆಯನ್ನು 'ದೇವಕೊಳಗ' ಎಂದು ಕರೆದು ಅಕ್ಕಿಯನ್ನು ತೆಗೆದಿರಿಸಿ ಉಳಿದುದನ್ನು ತಮ್ಮ ಬಳಕೆಗೆ ಇರಿಸಿಕೊಳ್ಳುವುದಿಲ್ಲವೆ? ಹಾಗೆಯೇ ಅನಗತ್ಯವಾಗಿ ದೇವರ ಹೆಸರು ಎಳೆದು ತಂದು ಸಂವಾದ ನಡೆಸುವುದು ಸರಿಯಲ್ಲ. ಇದು 'ದೇವರಾಣೆಗೂ' ಸರ್ವಸಮ್ಮತವಾಗುತ್ತದೆ.

''ಅಡಿಗಡಿಗೆ ದೇವರಾಣೆ ಎಂಬ ವಚನವೇ ಹೊಲ್ಲ'' ಎಂದು ಬಸವಣ್ಣನವರೇ ಹೇಳಿದ್ದರೂ ಜನತೆಯ ವಾಗ್ರೂಢಿಯಿಂದ ಪ್ರಭಾವಿತನಾಗಿ ಹಾಗೆ ಹೇಳ ಬಯಸುತ್ತೇನೆ. ಅನೇಕರು ದೇವರ ಹೆಸರನ್ನು ಸಾಮಾನ್ಯವಾಗಿ ಎತ್ತುವುದಿಲ್ಲ. ಸಂಕಟ ಬಂದರೆ ಮಾತ್ರ ವೆಂಕಟರಮಣ ಎಂದಾರು. ನಾನೂ ಅದಕ್ಕೆ ದೂರವಲ್ಲ. ಅವನ ಮೇಲೆ ಭಾರ ಹಾಕುವವರು ಪರಾವಲಂಬಿಗಳು.

ದೇವರು ಯಾವಾಗಲೂ ದಿಂಡರ ಜತೆಯಲ್ಲೇ ಬರುತ್ತಾನೆ. ದೇವರು ದಿಂಡರು ಎಂದು ವ್ಯಾಕರಣ ಹೇಳುತ್ತದೆ. ದಿಂಡ ಎಂದರೆ ಸೊಕ್ಕಿನವನು ಮದಿಸಿದವನು ಎಂದರ್ಥ. ಸಜ್ಜನನಾದ ಆ ದೇವರು ದಿಂಡರ ಕೈಗೆ ಏಕೆ ಸಿಕ್ಕಿದ ಎಂಬುದಕ್ಕೆ ಆಂಧ್ರದ ಜಗನ್ಮೋಹನನೇ* ಉತ್ತರ ನೀಡಬೇಕು.

ನನ್ನ ಕೊನೆಯ ಮಾತು ಇಷ್ಟೇ. ಅಯ್ಯಾ ದೇವರೇ! ನೀನು ಇದ್ದರೆ ನಿನ್ನ ಪಾಡಿಗೆ ಇರು. ನಮ್ಮನ್ನೂ ಇರಲು ಬಿಡು.

***ಜಗನ್ಮೋಹನ ಎಂದರೆ ಆಂಧ್ರದ ಮುಖ್ಯ ಮಂತ್ರಿ ಆಗಿದ್ದ ದಿವಂಗತ ವೈಎಸ್‌ಆರ್ ಅವರ ಪುತ್ರ. ಅವನ ಆಸ್ತಿ ಕೇವಲ ರೂ. 4000 ಕೋಟಿ ಎಂದು ಹೇಳಲಾಗಿದೆ. -ಸಂ.**

---

## ಬೀಚಿ ಪ್ರಶ್ನೋತ್ತರ

ಪ್ರಶ್ನೆ - ಭಗವಂತ ಎಲ್ಲರಿಗೂ ಒಂದೇ ವಿಚಾರ ಭಾವನೆಗಳನ್ನು ಕೊಡದೇ ವೈವಿಧ್ಯಮಯ ವಿಚಾರ ಜೀವಿಗಳನ್ನು ಸೃಷ್ಟಿಸಿದ ಕಾರಣವಾದರೂ ಏನು?

ಉತ್ತರ - ಎಲ್ಲದಕ್ಕೂ ರಬ್ಬರ್ ಸ್ಟಾಂಪ್ ಒತ್ತುವ ಪ್ರೆಸಿಡೆಂಟ್ ಅಲ್ಲ ಭಗವಂತ.

# ಹನುಮಾವತಾರ

'ದೇವರು' ವಿಶೇಷ

– ಎನ್. ರಾಮನಾಥ್

**'ರು'** ಎಂದು ಅಂತ್ಯಗೊಂಡಿರುವುದರಿಂದ ಬಹುವಚನವೋ ಅಥವಾ 'ದೇವರು ನೋಡ್ಕೋತಾನೆ' ಎಂದು ಹೇಳುವುದರಿಂದ ಏಕವಚನವೋ ಎಂಬುದರಿಂದಲೇ ದೇವರ ಬಗ್ಗೆ ಗೊಂದಲ ಶುರು. ಇನ್ನು ದೇವನಿರುವನೇ, ಇಲ್ಲವೇ ಎಂಬುದರ ಬಗ್ಗೆ ಮುಗಿಯದ ವಾದ, ವಾಗ್ವಾದ.

ದೇವನೇ ಇಲ್ಲದಿದ್ದರೆ ದೇವಮಾನವ? ಮಾನವನಿಗೂ, ದೇವರಿಗೂ ಇರುವುದು ಒಂದೇ ವ್ಯತ್ಯಾಸ – ಮಾನವ ಎಷ್ಟೋ ಬಾರಿ ತನ್ನನ್ನು ತಾನೇ ದೇವನೆಂದು ತಿಳಿದಿರುತ್ತಾನೆ; ಅಷ್ಟೇ ಅಲ್ಲ, ನಂಬಿರುತ್ತಾನೆ. ಹೀಗೆ ನಂಬಿರುವವನೇ ದೇವನೂ ಕಾಲಿಡಲು ಅಂಜುವಂತಹ, ನಾಚುವಂತಹ, ಹೇಸಿಗೆ ಪಡುವಂತಹ, ಜಿಗುಪ್ಸೆ ಪಡುವಂತಹ, ಮತ್ತೂ ಇನ್ನೇನೇನೋ ಪಡುವಂತಹ ಮಠ, ಆಶ್ರಮಗಳನ್ನು ಸ್ಥಾಪಿಸಿಕೊಂಡು, ದೇವನಿಗಿಂತಲೂ ಹೆಚ್ಚಿನ ಐಷಾರಾಮಿ ಬದುಕು ಬದುಕುತ್ತಾನೆ.

> **ದೇವನಿರುವನೋ ಇಲ್ಲವೋ, ಆದರೆ ದೇವರು ಮೈಮೇಲೆ ಬಂದ ಮನುಷ್ಯರಿರುವುದಂತೂ ದಿಟ**

ಹಾಗೆ ನೋಡಿದರೆ ದೇವ ಕಡುಬಡವನೇ. ಇಂದಿಗೂ ದೇವನಿಗೆ ಒಂದು ರೋಲ್ಸ್‌ರಾಯ್ಸ್ ಕಾರ್ ಆಗಲಿ, ಒಂದು ಹೆಲಿಕಾಪ್ಟರ್ ಆಗಲಿ ಇಲ್ಲ, ಅದೇ ಓಲ್ಡ್ ಮಾಡೆಲ್, ಓಲ್ಡ್ ಏಜ್ ಹುಲಿ, ಇಲಿ, ನವಿಲು, ಆನೆ ಇತ್ಯಾದಿಗಳೇ ಅವನ ವಾಹನ. ದೇವನು ಆಗಿನ ಕಾಲದಲ್ಲಿ ಮಿಡಲ್ ಈಸ್ಟ್‌ನಲ್ಲಿ ಅವತಾರ ತಾಳದೇ ಇದ್ದುದರಿಂದ ಅವನಿಗೂ ಪೆಟ್ರೋಲ್, ಡೀಸೆಲ್ ವಾಹನಗಳಿಗೂ ಹೊಂದಾಣಿಕೆ ಆಗಲಿಲ್ಲವೇನೋ. ಭಾರತದಲ್ಲಿನ ಇಂಧನ ಬೆಲೆ ಭರಿಸಲಾಗದೆ ಇಷ್ಟೇ ಮೇವು ತಿಂದು ಅಷ್ಟು ಮೈಲೇಜ್ ಓಡುವಂತಹ ನಿಸರ್ಗ ವಾಹನಗಳೇ ಸೂಕ್ತವೆಂದು ಅವನ್ನೇ ಅವಲಂಬಿಸಿದನಂತೆ.

ದೇವನಿರುವನೋ ಇಲ್ಲವೋ, ಆದರೆ ದೇವರು ಮೈಮೇಲೆ ಬಂದ ಮನುಷ್ಯರಿರುವುದಂತೂ ದಿಟ. ದೇವರನ್ನು ಮೈಯಲ್ಲಿ ಹೊತ್ತ ಈ 'ದೇವವಾಹನ'ಗಳದು ಬಾಟಲಿಯ ಪರಮಾತ್ಮ ಒಳಹೊಕ್ಕಾಗ ಆಡುವ ಆಟಕ್ಕಿಂತ ಹೆಚ್ಚೇನೂ ಭಿನ್ನವಾಗಿರುವುದಿಲ್ಲ. ಕಲ್ಚರ್ಡ್ ಕಮೆಡಿಯನ್ ಹಿರಣ್ಣಯ್ಯನವರು ಕಂಡು, ಪಾಲ್ಗೊಂಡ ಇಂತಹ ಒಂದು ದೇವವಾಹನ ಪ್ರಸಂಗ ಬಹಳ ಸ್ವಾರಸ್ಯಕರವಾಗಿದೆ. ಒಂದು ಹಳ್ಳಿ. ಅದರಲ್ಲೊಂದು ಆರಂಕಣದ ಹೆಂಚಿನ ಮನೆ. ಮನೆಯಲ್ಲಿ ಒತ್ತೊತ್ತಾಗಿ ಕುಳಿತರೆ ಇಪ್ಪತ್ತು ಜನ ಕುಳಿತುಕೊಳ್ಳಬಹುದಾದಂತಹ ಹಜಾರ. ಕೇಂದ್ರ ಬಿಂದುವಾದ ಒಬ್ಬ ಗಂಡಸು ತನ್ನ ತಲೆಯನ್ನು 'ಬೇಡ, ಬೇಡ' ಎನ್ನುವ ರೀತಿಯಲ್ಲಿ ಅತ್ತಿಂದಿತ್ತ ಅಲ್ಲಾಡಿಸುತ್ತಾ ಕುಳಿತಿದ್ದಾನೆ. ಬರುಬರುತ್ತಾ ತಲೆ ಅಲ್ಲಾಡಿಸುವುದು ಭಿನ್ನಮತೀಯ ಮಂತ್ರಿ ಆಡಿಸುವಷ್ಟರ ರಭಸ ಮುಟ್ಟಿತು. ಜೊತೆಜೊತೆಗೇ ಮಂತ್ರಿ ಸ್ಥಾನ ಕಳೆದುಕೊಂಡಾಗ ಗೂಳಿಹಟ್ಟಿ ಅರಚಿದಂತಹ

ಹೂಂಕಾರಗಳು ಹೊರಡುತ್ತಿದ್ದವು. ವ್ಯಕ್ತಿ ಧಡಾರನೆ ಎದ್ದವನೇ ''ಹೂಂ. ನಾನು ಹನುಮಂತ. ಏನಲೇ ಕಾಳ್ಯ, ಎಬರಾಸಿ, ಪಕ್ಕದ ಹಟ್ಟೀಲಿ ದನ ಕದೀತಿಯೇನಲೇ...'' ಎನ್ನುತ್ತಾ ಅಲ್ಲಿದ್ದ ಕಾಳ್ಯನನ್ನು ಪಾರ್ಲಿಮೆಂಟ್‌ನಲ್ಲಿ ಮಂತ್ರಿಗಳು ಬಳಸುವ ಭಾಷೆಯಲ್ಲಿ ಬಯ್ಯಲಾರಂಭಿಸಿದ. ದೇವ, ದೇವವಾಹನ ಆಡುವ ಭಾಷೆ ಸಂಸ್ಕತವೇ, ವ್ಯತ್ಯಾಸವಿಷ್ಟೇ – ದೇವನದು ಪಾಲಿಷ್ಡ್ ಭಾಷೆ, ಇವರದು ಪೊಲೀಸ್ ಭಾಷೆ!

ಕಾಳನಿಗೆ ಕೋಳಿ ದಂಡ ವಿಧಿಸಿ, ಮತ್ತಷ್ಟು ಭಕ್ತರನ್ನು ಹೀನಾಮಾನವಾಗಿ ಬೈದು ಈ ಹನುಮಾವತಾರಿ ಒಂದೆರಡು ತಿಂಗಳಿಗೆ ಆಗುವಷ್ಟು ದಿನಸಿ, ಹಣ, ಕೋಳಿ, ಕುರಿಗಳನ್ನು ಸಂಪಾದಿಸುತ್ತಿರುವುದು ಆ ದೇವವಾಹನನೊಡನೆ ಅವನ ಹಳ್ಳಿಗೆ ಬಂದಿದ್ದ ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯನವರ ಗಮನ ಸೆಳೆಯಿತು. ಮಳೆಗಾಲದ ನಾಟಕರಹಿತ ದಿನಗಳನ್ನು ಕಳೆಯಲು ಆ ಮಿತ್ರನೊಡನೆ ಇವರು ಅಲ್ಲಿಗೆ ಬಂದಿದ್ದರು. ಎನ್ ಐಡಲ್ ಮೈಂಡ್ ಈಸ್ ಎ ಡೆವಿಲ್ಸ್ ವರ್ಕ್‌ಷಾಪ್ ಅಲ್ಲವೆ? ಅವರಿಗೆ ಈ ಮಿತ್ರನಲ್ಲಿ ಹನುಮಾನ್ ಇರುವುದರ ಬಗ್ಗೆ ಅನುಮಾನ್! ಕುಳಿತಲ್ಲೇ ಲೆಕ್ಕಾಚಾರ ಹಾಕಿದ ಹಿರಣ್ಣಯ್ಯನವರು ಆ ನರಪೇತಲನಂತಿದ್ದ ಹನುಮವಾಹನನ ಮೇಲೆ ಛಂಗನೆ ನೆಗೆದು ಕುಳಿತು ''ಹನುಮಾ! ಹೇಗಿದ್ದೀಯೋ? ಬಹಳ ದಿವಸ ಆಗಿಹೋಯ್ತಲ್ಲವೇ. ನಾನು ರಾಮ ಬಂದಿದ್ದೇನೆ. ತ್ರೇತಾಯುಗದಲ್ಲಿ ನೀನು ನನ್ನನ್ನೂ, ಲಕ್ಷ್ಮಣನನ್ನೂ ಭುಜದ ಮೇಲೆ ಕೂರಿಸಿಕೊಂಡು ಲಂಕೆಗೆ ಕರೆದುಕೊಂಡು ಹೋಗಿದ್ದಿಯಲ್ಲಾ, ನಂತರ ನಿನ್ನ ಭುಜ ಏರಿದ್ದೇ ಇಲ್ಲ. ಈಗ ಆ ಅವಕಾಶ ಸಿಕ್ಕಿತು ನೋಡು. ನಡೆ ಲಂಕೆಗೆ ಹೋಗೋಣ'' ಎಂದು ಅಪ್ಪಣೆ ನೀಡುವ ಧ್ವನಿಯಲ್ಲಿ ಹೇಳಿದರು.

ಹಿರಣ್ಣಯ್ಯನವರು ಒಳ್ಳೆಯ ತೂಕದ ವ್ಯಕ್ತಿ. ದೇವ ಮೈಮೇಲೆ ಬಂದವನೋ ಗಾಳಿಗೆ ತೂರಾಡುವ ದೇಹವುಳ್ಳವನು. ಹಾಗೆಯೇ ತಟ್ಟಾಡುತ್ತಾ ಒಂದು ಮೂಲೆಗೆ ಸರಿದ ಅವನು ''ಲೋ ಹಿರಣ್ಣೀ, ಮಳೆಗಾಲದಲ್ಲಿ ನಿನ್ನ ಕಂಪನಿ ಬಂದ್ ಆಗಿ, ನನ್ನ ಪಾತ್ರ ಬಂದ್ ಆದ ತಕ್ಷಣ ಇಲ್ಲಿ ಬಂದು ಈ ಪಾತ್ರ ಹಾಕಿಕೊಳ್ಳದೇ ಹೋದರೆ ಹೆಂಡತಿ ಮಕ್ಕಳಿಗೆ ಹೊಟ್ಟೆಯ ಮೇಲೆ ತಣ್ಣೀರುಬಟ್ಟೇನೇ ಗಟ್ಟಿ ಕಣೋ. ಇಳಿಯೋ ಕೆಳಗೆ, ದಮ್ಮಯ್ಯ ಕಣೋ'' ಎಂದು ಗೋಗರೆದ.

''ನನ್ನ ಸ್ಥಿತಿಯೂ ಅದೇ ಅಲ್ಲವೇನೋ... ಈಗ ಸುಮ್ಮನೆ ಲಂಕೆಗೆ ನಡೆ ಹನುಮ. ಒಂದು ನಿಮಿಷ ತಡಿ, ಲಕ್ಷ್ಮಣನನ್ನೂ ಕರೆಯುತ್ತೇನೆ. ಇಬ್ಬರನ್ನೂ ಹೊತ್ತು ಹೋಗುವಿಯಂತೆ'' ಎಂದರು ಹಿರಣ್ಣಯ್ಯ.

''ಎಲ್ಲರ ಎದುರು ಅವಮಾನ ಮಾಡಬೇಡ್ವೋ. ನಿನಗೆ ಏನು ಬೇಕು ಹೇಳೋ.''

''ಈ ನಾಟಕದಲ್ಲಿ ನಿನಗೆ ಬಂದಿದ್ದರಲ್ಲಿ ಫಿಫ್ಟಿ–ಫಿಫ್ಟಿ.''

ದೇವವಾಹನ ಕರಾರಿಗೆ ಒಪ್ಪಿದ. ಹಿರಣ್ಣಯ್ಯನವರು ಕೆಳಗೆ ಇಳಿದರು.

ಹನುಮನ ಆರ್ಭಟ, ಕಲೆಕ್ಷನ್ ಮುಂದುವರೆಯಿತು!!!

✤

'ದೇವರು' ವಿಶೇಷ

# ದೇವರಂತಹ ಗಂಡ!

– ಸಿ.ಆರ್. ಸತ್ಯ

''ಇದು ಏನು ಅಕ್ಕೀ ರೀ...? ದೇವರೇ ಕಾಪಾಡಬೇಕು''

''ಅಲ್ಲ ಕಣೆ, ಹುಟ್ಟಿಸಿದ ದೇವರು ಅಕ್ಕಿ ತಿನ್ನಿಸೋದು ಬಿಟ್ಟು ಹುಲ್ಲು ತಿನ್ನುಸ್ತಾನ್ಯೆ?''

''ಹುಲ್ಲಿನ ವಿಷಯ ಗೊತ್ತಿಲ್ಲಾ ರೀ, ಒಟ್ಟಿನಲ್ಲಿ ಕಲ್ಲನ್ನಂತೂ ತಿನ್ನಿಸ್ತಾನೆ. ಅದೇನು ಅಕ್ಕಿ ಅಂತ ತಂದಿದೀರಿ? ಅಕ್ಕಿ ತುಂಬಾ ಕಲ್ಲೇ ತುಂಬಿದೆಯಲ್ರೀ?''

''ಹೌದೆ? – ಸಾರ್, ಅಕ್ಕಿ ಬೆಲೆ ಜಾಸ್ತಿ ಆಗಿದೆ ಒಪ್ಪಿಕೋತೀನಿ, ಆದರೆ ದೇವರ ಆಣೆ ಇದು ಒಳ್ಳೇ ಅಕ್ಕಿ – ಅಂತ ದೇವರ ಹೆಸರಿನಲ್ಲಿ ಅಂಗಡಿಯವನು ಕೊಟ್ಟನಲ್ಲೇ?''

''ಸರಿ, ಅವನು ದೇವರು ಅಂತ ಅಂದ. ನೀವು ಕೋಲೆ ಬಸವನ ತರಹ ಹ್ಞೂಂ, ಹ್ಞೂಂ! ಅಂತ ತಲೆ ಅಲ್ಲಾಡಿಸಿ ತಂದಿದೀರಿ.''

''ದೇವರ ಬಗ್ಗೆ ಲೈಟ್ ಆಗಿ ಮಾತಾಡ್ಬೇಡ ಕಣೆ. ನಾನು ಏನು ಕೆಲಸ ಮಾಡಿದ್ರೂ ಯಾವತ್ತೂ ದೇವರ ಹೆಸರಿನಲ್ಲೇ ಮಾಡೋದು''

''ಗೊತ್ತು ರೀ. ಅದಕ್ಕೆ ಅಲ್ಲವೆ ನಿಮ್ಮ ಸರ್ವಿಸ್ ಎಲ್ಲಾ ಸರಕಾರದ ಮುಜರಾಯ್ ಡಿಪಾರ್ಟ್‌ಮೆಂಟ್‌ನಲ್ಲಿ ದೇವಸ್ಥಾನಗಳ ಲೆಕ್ಕ ಪತ್ರಗಳನ್ನು ನೋಡೋದರಲ್ಲೇ ಕಳಿದಿದ್ದು''

''ನನ್ನ ಸರ್ವಿಸ್ ಲೈಫ್‌ನಲ್ಲಿ ದಿನಾನೂ ವಿಧಾನಸೌಧದ ಒಳಗೆ ಹೋಗೋವಾಗ ಮೇಲಕ್ಕೆ ತಲೆಯೆತ್ತಿ 'ಸರ್ಕಾರದ ಕೆಲಸ ದೇವರ ಕೆಲಸ' ಅಂತ ಬರೆದಿದ್ದಾರಲ್ಲಾ ಅದನ್ನ ಓದಿಕೊಂಡೇ ಒಳಗೆ ಹೋಗ್ತಾ ಇದ್ದಿದ್ದು...''

''ಹೌದು, ಹೌದು... ನಿಮ್ಮ ಜೊತೆಯವರೆಲ್ಲಾ ಅದನ್ನ ಸರಕಾರದ ಕೆಲಸ ಟೇಬಲ್ ಕೆಳಗಿನ ಕೆಲಸ'' ಅಂತ ಓದ್ಕೊಂಡು, ಕೈ ತುಂಬಾ ಲಂಚ ತೊಗೊಂಡು, ರಿಟೈರ್ಡ್ ಆಗೋಕ್ಕೆ ಮುಂಚೆ ಲಕ್ಷಾಧಿಪತಿಗಳಾದರು. ನೀವೂ ಇದೀರಾ... ಜುಜುಬಿ ಪೆನ್‌ಶನ್ ತೊಗೊಂಡು.''

''ಅವರೆಲ್ಲಾ ಲಂಚ ತೊಗೊಂಡು ಲಕ್ಷಾಧಿಪತಿಗಳಾಗಿರಬಹುದು ಕಣೆ. ಆದರೆ ಅವರನ್ನ ದೇವರು ಮೆಚ್ಚುತ್ತಾನ್ಯೆ?''

''ಮೆಚ್ಚದೆ ಬಿಡ್ತಾನ್ಯೆ? ಅಂತಹವರಿಂದಲೇ ಅಲ್ಲವೆ ಅವನಿಗೆ ಬಂಗಾರದ ಕಿರೀಟ, ಕಾಲಿಗೆ ಚಿನ್ನದ ಪಾದುಕೆ, ಕತ್ತಿಗೆ ನವರತ್ನ ಹಾರ, ಅರ್ಧ ಕಟ್ಟಿರೋ ದೇವಸ್ಥಾನಕ್ಕೆ ಗೋಪುರ, ಸೌಂಡ್ ಸಿಸ್ಟಮ್ – ಇವೆಲ್ಲಾ ಸಿಗೋದು?''

''ದೇವರನ್ನು ಮೆಚ್ಚಿಸೋದಕ್ಕೆ ಬರೀ ಚಿನ್ನಾನೇ ಬೇಕು ಅಂತ ಯಾರು ಹೇಳಿದ್ರು ಅಂತೀನಿ? ಮೊನ್ನೆ ನಾನೂ ನಮ್ಮ ದೇವಸ್ಥಾನದಲ್ಲಿ ಅನ್ನದಾನ ಮಾಡಿಸ್ಲಿಲ್ವೆ? ಅದರಿಂದ ಬಂದ ಪುಣ್ಯಕ್ಕೇನು ಕಮ್ಮಿ ಇಲ್ಲ ಬಿಡು.''

''ಅದೆಷ್ಟು ಪುಣ್ಯ ನಿಮಗೆ ದಕ್ಕುತ್ತೋ ನಾನೂ ನೋಡ್ತೀನಿ. ಅಲ್ರೀ, ಐವತ್ತು ಜನಕ್ಕೆ ಅನ್ನದಾನ ಮಾಡ್ತೀನಿ ಅಂತ ದೇವಸ್ಥಾನಕ್ಕೆ ಹಣ ಕೊಟ್ರಲ್ಲಾ, ಅವತ್ತು ಊಟಕ್ಕೆ ನಿಮ್ಮ ಮನೆ ಕಡೆಯವರೇ ಅರವತ್ತು ಜನ ಬಂದು ತಿಂದು ಹೋಗಿದ್ದು ಜ್ಞಾಪಕವಿಲ್ಲವೆ? ಅಂದ ಹಾಗೆ, ಬೆಳಿಗ್ಗೆ ಪಕ್ಕದ ಮನೆ ಕೋಕಿಲ – ಸ್ವಲ್ಪ ನಿಮ್ಮ ಯಜಮಾನರನ್ನ ನಮ್ಮನೇಗೆ ಕಳಿಸ್ತೀರಾ? ಏನೋ ಎಲೆಕ್ಟ್ರಿಕಲ್ ಪ್ರಾಬ್ಲಮ್ಮು – ಅಂತ ನನಗೆ ಹೇಳಿದಾಗ ಮಿಂಚಿನಂತೆ ಅವಳ ಮನೆಗೆ ಓಡಿದ್ರಲ್ಲಾ – ಅದೇನು ದೇವರ ಕೆಲಸಾನೇ?''

''ಹ್ಞೂಂ ಕಣೇ ಅವರ ದೇವರ ಮನೆಯ ಸ್ವಿಚ್ಚು ಸರಿಯಾಗಿರಲಿಲ್ಲ. ಇನ್ನೇನು ಗೌರಿ ಗಣೇಶನ ಹಬ್ಬ ಬರುತ್ತೆ. ಅವಳ ಗಂಡ ಬೇರೆ ಟೂರ್‌ನಲ್ಲಿ ಹೋಗಿದಾನೆ. ಅದಕ್ಕೆ ಲೈಟ್ಸ್‌ನ್ನೆಲ್ಲಾ ಸರಿಮಾಡಿ, ಸ್ವಿಚ್ ಬೇರೆ ಬದಲಾಯಿಸಿ ಬಂದೆ. ಪಾಪ, ಅವಳಿಗೆ ಎಷ್ಟು ಸಂತೋಷವಾಯ್ತು ಅಂತೀ.... ಕೂತ್ಕೊಳ್ಳಿ, ಬೌರ್ನ್‌ವಿಟಾ ಕೊಡ್ತೀನಿ ಅಂತ ಅಂದಳು – ನಾನೇ ಬೇಡ ಅಂದೆ.''

''ಅಯ್ಯೋ ಪಾಪ, ಈ ಸಲ ಗೌರಿ ಹಬ್ಬದ ದಿನ ಅವಳಿಗೂ ಗೌರಿ ಬಾಗಿನ ಕೊಟ್ಟು ಬರ್ತೀರೋ ಏನೋ!''

''ಎಲಕ್ಟ್ರಿಕಲ್ ಕೆಲಸಾನೂ ದೇವರ ಕೆಲಸ ಕಣೇ.''

''ಯಾಕೆ ಇವತ್ತು ಇನ್ನೂ ನೀವು ದೇವಸ್ಥಾನಕ್ಕೆ ಹೋಗಿಲ್ವೆ? ರಿಟೈರ್ಡ್ ಆದಮೇಲೆ ತಪ್ಪದೇ ಇಷ್ಟು ಹೊತ್ತಿಗೆ ಸವಾರಿ ಹೊರಡುತ್ತಿತ್ತಲ್ಲಾ... ಏನು, ಸಮಾಚಾರ?''

''ಸಮಾಚಾರ ಏನು ಬಂತು... ಇಷ್ಹೊತ್ತಿಗೆ ಜನ ಕಡಿಮೆ ಇರ್ತಾರೆ ಅಷ್ಟೆ''

''ನಮ್ಮ ಲೇಡೀಸ್ ಕ್ಲಬ್ ಫ್ರೆಂಡ್ ಪಂಕಿ – ಅದೇ, ಪಂಕಜರೀ.... ಫೋನ್ ಮಾಡಿದ್ಲು. ನಾವು ದಿನಾನೂ ದೇವಸ್ಥಾನದಲ್ಲಿ ಸೌಂದರ್ಯ ಲಹರಿ ಪ್ರಾಕ್ಟೀಸ್ ಮಾಡೋ ಸಮಯಕ್ಕೆ ಸರಿಯಾಗಿ ನಿಮ್ಮ ಯಜಮಾನ್ರು ಅಲ್ಲಿಗೆ ಬರ್ತಾರೆ. ನಾವು ಹಾಡೋದನ್ನ ತುಂಬಾ ಗಮನ ಕೊಟ್ಟು ಕೇಳ್ತಾರೆ. ನಿಮ್ಮ ಯಜಮಾನರಿಗೆ ದೇವರಲ್ಲಿ ತುಂಬಾ ಭಕ್ತಿನಪ್ಪ – ಅಂತ''

''ಹೌದು ಕಣೆ, ಅದೆಷ್ಟು ಚೆನ್ನಾಗಿ ಇರುತ್ತೆ ಅಂತೀ... ಅಲ್ಲಿಂದ ಹೊರಡೋಕ್ಕೇ ಮನಸ್ಸು ಬರೋಲ್ಲ.''

''ಏನು ಸೌಂದರ್ಯ ಲಹರೀನೋ, ಸುಂದರ ವಿಹಾರವೋ? ಅಲ್ಲಿ ಗಂಡಸರಿಗೇನು ಕೆಲಸ?''

''ಇದ್ಯೇನೇ ಹೀಗೆ ಕೇಳ್ತೀ? ಸೌಂದರ್ಯ ಲಹರಿ ರಚಿಸಿದವರೇ ಗಂಡಸರು – ಶಂಕರಾಚಾರ್ಯರು''

''ನನಗೆ ಮ್ಯೂಸಿಕಲ್ ಟ್ಯಾಲೆಂಟ್ ಇದೆ. ರಿಟೈರ್ಡ್ ಆದಮೇಲೆ ದೇವರ ನಾಮಗಳನ್ನು

---

**ಬೀಚಿ ಪ್ರಶ್ನೋತ್ತರ**

ಪ್ರಶ್ನೆ – ದೇವರು ಇದ್ದಾನೆಯೇ ಎಂಬುದಕ್ಕೆ ಸಾಕ್ಷಿ ಏನಾದರೂ ಇದೆಯೇ?

ಉತ್ತರ – ಅನೇಕ ವಿಷಯಗಳಲ್ಲಿ ಸಾಕ್ಷಿ ಇರುವುದಿಲ್ಲ ಉದಾ: ತಂದೆಯ ಹೆಸರು

ಕಲೀತೀನಿ ಅಂತ ಮ್ಯೂಸಿಕ್ ಕ್ಲಾಸಿಗೆ ಸೇರಿಕೊಂಡ್ರಲ್ಲಾ, ಎಲ್ಲಿ ತನಕ ಬಂತು ನಿಮ್ಮ ದೇವರ ನಾಮಗಳ ಅಭ್ಯಾಸ?''

''ಜ್ಞಾಪಿಸಿದ್ದಕ್ಕೆ ಥ್ಯಾಂಕ್ಸ್ ಕಣೆ. ಪ್ರಾಕ್ಟೀಸ್ ಮಾಡೋದೇ ಮರೆತು ಹೋಗಿತ್ತು! ಎಂತಾ ಮ್ಯೂಸಿಕ್ ಟೀಚರ್ ಅಂತೀ... ಆ ಹಾವ, ಆ ಭಾವ, ಆ ಗಂಟಲು, ಆ ಠೀವಿ.. ಆಕೆ ಗಾನ ಸರಸ್ವತೀನೇ ಕಣೆ. ಅವಳು 'ರಾಧಾ ಸಮೇತ ಕೃಷ್ಣ' ಹಾಡು ಹೇಳೋದು ನೀನು ಕೇಳಬೇಕು. ಸಧ್ಯ ದೇವರ ದಯೆಯಿಂದ ನಮ್ಮಲ್ಲಿ ಇಂತಹ ರಾಧಾಗಳು, ಇಂತಹ ಕೃಷ್ಣಗಳು ಇದಾರಲ್ಲ ಅದಕ್ಕೆ ತಕ್ಕ ಹಾಗೆ ಇಂತಹಾ ಮ್ಯೂಸಿಕ್ ಟೀಚರ್ ಬೇರೆ. ಗ್ರೇಟ್! ಎಲ್ಲಾ ಆ ದೇವರ ಆಟ ಕಣೆ!''

''ಈ ನಿಮ್ಮ ದೇವರ ಆಟದ ಮಧ್ಯೆ ನನಗೊಂದು ಪುಟ್ಟ ಕೆಲಸ ಮಾಡ್ಕೊಡ್ತೀರಾ? ಕಳೆದ ಒಂದು ವರ್ಷದಿಂದ ಕೇಳ್ತಾನೇ ಇದೀನಿ. ಪಾಪ, ನಿಮಗೆ ಇನ್ನೂ ಸಮಯ ಸಿಕ್ಕಿಲ್ಲ.''

''ಅಯ್ಯೋ, ಅದಕ್ಕೇನಂತೆ ಹೇಳು''

''ಇದು ಕೋಕಿಲನ ದೇವರ ಮನೆ ಕೆಲಸದಷ್ಟೇನೂ ದೊಡ್ಡ ಕೆಲಸ ಅಲ್ಲ. ನಮ್ಮ ಮನೆ ದೇವರ ಮನೇಲೂ ಅವತ್ತಿನಿಂದ ಗೋಡೆಗೆ ಒಂದು ಗಟ್ಟಿ ಮೊಳೆ ಹೊಡ್ಕೊಡಿ, ಹೋದ ವರ್ಷ ತಂದ ಲಕ್ಷ್ಮೀ ಫೋಟೋ ತಗಲಿ ಹಾಕಬೇಕು ಅಂತ ಏನಿಲ್ಲಾ ಅಂದರು ಒಂದು ನೂರು ಸಲವಾದರೂ ಹೇಳಿದೀನಿ''

''ಇದ್ಯಾವ ದೊಡ್ಡ ಕೆಲಸ ಹೇಳು. ಇಂತಹ ಚಿಕ್ಕ ವಿಷಯಕ್ಕೆ ಪಾಪ ಆ ಕೋಕಿಲನ ಹೆಸರು ಯಾಕೆ ಎಳೀತಿ...? ಈಗ ನನ್ನ ಹತ್ರ ದೊಡ್ಡ ಮೊಳೆ ಇಲ್ಲ, ಇವತ್ತೇ ಅಂಗಡಿಯಿಂದ ಕೊಂಡ್ಕೊಂಡು ಬಂದು..''

''ಹಾಗಾದ್ರೆ, ಅದಕ್ಕೆ ಇನ್ನೊಂದು ವರ್ಷ ಕಾಯ್ತೀನಿ ಬಿಡಿ''

''ಬೇಜಾರು ಮಾಡ್ಕೋಬೇಡ ಕಣೆ. ದೇವರನ್ನ ಮೆಚ್ಚಿಸೋಕ್ಕೆ ಫೋಟೋನೇ ಇರಬೇಕು, ಅನ್ನದಾನಕ್ಕೆ ಐವತ್ತು ಜನಕ್ಕಿಂತ ಕಮ್ಮೀನೇ ಇರಬೇಕು, ಸೌಂದರ್ಯ ಲಹರೀನ ಹೆಂಗಸರೇ ಹೇಳಬೇಕು. ಗಂಡಸರು ನೋಡಬಾರದು, ಅಂತೆಲ್ಲಾ ಯಾವ ರೂಲ್ಸೂ ಇಲ್ಲಾ. ಬರೀ ಗೋಡೆಗೆ ಪ್ರಾರ್ಥಿಸ್ಕೊಂಡರೂ ಸಾಕು. ದೇವರು ಕಣ್ಣು ಬಿಡ್ತಾನೆ. ಹೃದಯ 'ಕ್ಲೀನ್' ಆಗಿ ಇರಬೇಕು ಕಣೆ ಅಷ್ಟೆ! ನಾನು ಬರಲಾ? ಸೌಂದರ್ಯ ಲಹರೀನೂ ಮುಗಿದೇ ಹೋಗಿರುತ್ತೋ ಏನೋ. ದೇವಸ್ಥಾನಕ್ಕೆ ಹೊತ್ತಾಯ್ತು. ಮೊಳೆ ಅಂಗಡೀನೂ ಮುಚ್ಚಿಬಿಡ್ತಾರೋ ಏನೋ....''

✤

---

**ಬೀಚಿ ಪ್ರಶ್ನೋತ್ತರ**

ಪ್ರಶ್ನೆ – ದೇವರ ಮುಂದೆ ನಿಂತು ಪ್ರಾರ್ಥಿಸಿಕೊಳ್ಳುವಾಗ ಕೆನ್ನೆಗೆ ಹೊಡೆದುಕೊಳ್ಳುವರಲ್ಲಾ, ಅದರ ಅಂತರಾರ್ಥವೇನು ಮಹಾಸ್ವಾಮಿ?

ಉತ್ತರ – ಕೆನ್ನೆ ನಿನ್ನದು, ಕೈಯೂ ನಿನ್ನದು ನಾನನುಭೋಗಿಸುವ ನೋವೊಂದೇ ನನ್ನದಯ್ಯಾ ದೇವದೇವ

# ದೇವರ ಕಥೆ ಹೀಗಾಯಿತು

**'ದೇವರು' ವಿಶೇಷ**

**- ಡಾ. ಸಿದ್ಧಲಿಂಗಯ್ಯ**

ದೇವರುಗಳನ್ನು ನಂಬುವ ಜನವೇ ಜಾಸ್ತಿ. ದೇವರ ಹಬ್ಬ ಮಾಡಬೇಕು, ಪೂಜೆ ಮಾಡಬೇಕು ಎಂಬ ಆಸೆ ಬಹಳ ಜನಕ್ಕೆ ಇದೆ. ಭಕ್ತಿಯನ್ನು ಇಟ್ಟುಕೊಂಡಿರುವ ಜನಗಳಲ್ಲಿ ನಾವು ಇನ್ನೊಂದು ವಿಚಿತ್ರ ಗುಣವನ್ನು ಕಾಣಬಹುದು. ಅದೆಂದರೆ ದೇವರನ್ನು ರೇಗಿಸುವುದು. ತಮಗೆ ಅರಿವಿಲ್ಲದಂತೆಯೇ ಅವರು ಈ ಕೆಲಸವನ್ನು ಮಾಡುತ್ತಾರೆ. ರಾಮನ ಭಕ್ತರಾದ ಜನಗಳು ತಮ್ಮಲ್ಲೇ ಯಾವನಾದರೂ ಒಬ್ಬನು ಹೆಚ್ಚಾಗಿ ತಿನ್ನುತ್ತಾನೆ ಎಂದರೆ ಅವನಿಗೆ ''ಸಾಪಾಟುರಾಮ'' ಎಂಬ ಬಿರುದನ್ನು ಕೊಟ್ಟು ಗೌರವಿಸುತ್ತಾರೆ. ರಾಮ ಆ ರೀತಿ ತಿಂದದ್ದು ಎಲ್ಲೂ ಬಂದಿಲ್ಲ. ಆದರೂ ಹೊಟ್ಟೆ ಬಾಕನನ್ನು ರೇಗಿಸಲು ದೇವರ ಹೆಸರನ್ನು ಬಳಸುತ್ತಾರೆ. ಕಳ್ಳತನ, ತಟವಟ ಮಾಡುವವರನ್ನು ರೇಗಿಸಲು ''ಕೃಷ್ಣ'' ಎಂಬ ಪದ ಪ್ರಸಿದ್ಧವಾದದ್ದು. ದರಿದ್ರ ನಾರಾಯಣ, ದರಿದ್ರ ಲಕ್ಷ್ಮೀ ಎಂಬ ಪದಗಳನ್ನು ಹೇಳುವಾಗ ಇದೇ ಧೋರಣೆ ಇರುತ್ತದೆ.

## ದೇವರುಗಳು ಮತ್ತು ನಾಯಿಗಳು

**ಸಾಪಾಟುರಾಮ, ಮೂರುನಾಮ, ಆಂಜನೇಯನ ಮೂತಿ - ಇವೆಲ್ಲಾ ದೇವರ ಹೆಸರಿನಲ್ಲೇ ಇವೆ!**

ಶನಿಮಹಾತ್ಮ ಎಂಬುವವನು ಗಾಂಧಿ ಮಹಾತ್ಮನಂತೆ ಶಾಂತಿಪ್ರಿಯನಲ್ಲ. ಬಹಳ ಘಾಟಿ. ಆತನ ಕಥೆ ಓದಿಸುವುದೇನು? ನಾಟಕ ಆಡಿಸುವುದೇನು? ಶನಿ ಮೈದುಂಬುವುದೂ ಉಂಟು. ಇದು ಬಹಳ ಸೀರಿಯಸ್ ದೇವರು. ನಂಬಿದವರನ್ನು ಕೈಬಿಡಲಾರ. ಇವನನ್ನು ಆಡಿಕೊಂಡರೆ ಬರಬಾರದ ಕಷ್ಟ ಬರುತ್ತದೆ. ವಿಕ್ರಮರಾಜ ಎಂಬುವವನು ಇವನನ್ನು ಕೆಣಕಿ ತನ್ನ ಎರಡು ಕಾಲು, ಎರಡು ಕೈಗಳನ್ನು ಕಳೆದುಕೊಂಡನು. ಶನಿಮಹಾತ್ಮನ ಬಗ್ಗೆ ಜನರಿಗೆ ಎಷ್ಟೇ ಭಕ್ತಿ ಇದ್ದರೂ ಶನಿಯನ್ನು ಅನಿಷ್ಟವೆಂದೇ ಪರಿಗಣಿಸುತ್ತಾರೆ. ತಮಗೆ ಆಗದವರು ಬಂದರೆ ಶನಿ ವಕ್ಕರಿಸಿಕೊಂಡಿತು ಎನ್ನುತ್ತಾರೆ. ಶನಿ ಎಂಬುದು ಒಂದು ಬೈಗಳ. ಇನ್ನೂ ಕೆಲವರಿದ್ದಾರೆ ಅವರಿಗೆ ತಮ್ಮ ಭಕ್ತಿಯನ್ನು ಹೊರಗೆ ತೋರಿಸುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆ ಆಗಿದೆ. ಆದ್ದರಿಂದ ಅವರು ತಮ್ಮ ಮನೆಯಲ್ಲಿರುವ ನಾಯಿಗಳಿಗೆ ದೇವರ ಹೆಸರುಗಳನ್ನು ನಾಮಕರಣ ಮಾಡುತ್ತಾರೆ. ಕಜ್ಜಿ ನಾಯಿಗಳನ್ನೂ ಕೂಡ ರಾಮ, ಕೃಷ್ಣ, ನಾರಾಯಣ ಎಂದು ಕೂಗುತ್ತಾರೆ.

## ಕಾಶಿ ಮತ್ತು ತಿರುಪತಿ

ದೇವರುಗಳಿಗೆ ಯಾವ ಗತಿ ಒದಗಿದೆಯೋ ಅದೇ ಗತಿ ದೇವರು ನೆಲಸಿರುವ ಜಾಗಗಳಿಗೂ ಲಾಂಛನಗಳಿಗೂ ಒದಗಿವೆ. ತಿರುಪತಿ ಪ್ರಸಿದ್ಧವಾದ ಯಾತ್ರಾಸ್ಥಳ. ಜನ ಹೋಗುವುದೇನು? ಬರುವುದೇನು? ಹುಂಡಿಗೆ ಬೀಳುವ ದುಡ್ಡು ಲೆಕ್ಕವಿಲ್ಲ. ಸಾಮಾನ್ಯವಾಗಿ ಭಕ್ತರು ಈ ವಕ್ಕಲಿನವರಾದರೆ ಎರಡು ಮೂರು ವರ್ಷಕ್ಕೊಂದು ಸಾರಿ (ಮುಸಲ್ಮಾನರು ಮೆಕ್ಕಾ ಮದೀನ ದರ್ಶನಕ್ಕೆ ಹೋಗುವಂತೆ) ತಿರುಪತಿಗೆ ಹೋಗಲೇಬೇಕು. ಅಲ್ಲಿ ಇವರ

ತಲೆಯನ್ನು ಬೋಳಿಸಲಾಗುತ್ತದೆ. ತಲೆಯ ಕೂದಲನ್ನು ದೇವರಿಗೆ ಅರ್ಪಿಸಬೇಕು (ತಲೆಯ ಕೂದಲನ್ನು ಮಾತ್ರ). ಮದುವೆಯಾದ ಹೊಸದರಲ್ಲಿ ಕೆಲವರಿಗೆ ತಿರುಪತಿಗೆ ಹೋಗುವ ಚಪಲ. ಸುಮಾರಾಗಿ ತಮ್ಮ ಹೆಂಡತಿಯರನ್ನು ಕರೆದುಕೊಂಡು ಹೋಗಿ ಕೂದಲು ತೆಗೆಸಿ ಊರಿಗೆ ಬರುತ್ತಾರೆ. ನಂತರ ಆ ಹೆಂಗಸನ್ನು ಗುರುತು ಹಿಡಿಯುವುದೇ ಕಷ್ಟವಾಗುತ್ತದೆ. ಈತನು ತಿರುಪತಿಗೆ ಹೋಗಲು ಸಾಲ ಕೊಟ್ಟವನು ನಿತ್ಯವೂ ಇವನಿಗೆ ದರ್ಶನವನ್ನು ಕೊಡುತ್ತಾನೆ. ಇಷ್ಟಾದರೂ ಜನರು ತಿರುಪತಿಗೆ ಹೋಗಬೇಕು. ತಲೆ ಬೋಳಿಸಿಕೊಳ್ಳಬೇಕು. ಅದಕ್ಕಿಂತ ಹೆಚ್ಚಾಗಿ ಹಣೆಯಲ್ಲಿ ಎದ್ದು ಕಾಣುವಂತೆ ಮೂರು ನಾಮ ಇಕ್ಕಿಸಿಕೊಳ್ಳಬೇಕು. ಇದೇ ರೀತಿ ಕೆಲವರು ನಾವು ಕಾಶಿಯಲ್ಲೇ ಸಾಯುತ್ತೇವೆ ಎಂದು ಪಟ್ಟು ಹಿಡಿದು ಕಾಶಿಯಾತ್ರೆ ಮಾಡುತ್ತಾರೆ. ಇದು ಸಾವಿನ ಪ್ರಶ್ನೆಯಾದ್ದರಿಂದ ಮುದುಕ – ಮುದುಕಿಯರು ಕಾಶಿಯನ್ನೇ ಹೆಚ್ಚಾಗಿ ಇಷ್ಟಪಡುತ್ತಾರೆ.

## ಮೂರುನಾಮ – ಮಂಗಳಾರತಿ

ಭಕ್ತರು ಎಷ್ಟೇ ಗಂಭೀರವಾಗಿ ಈ ಯಾತ್ರೆಗಳನ್ನು ಮಾಡಿದರೂ ಸಹ ಕೆಲವರು ಯಾಕೋ ಇವುಗಳನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವುದಿಲ್ಲ. ಯಾವನಾದರೂ ಪರೀಕ್ಷೆಯಲ್ಲಿ ಫೇಲಾದನು ಎಂದು ತಿಳಿದು, ಅವನನ್ನು ಏನಾಯ್ತು ಎಂದು ಕೇಳಿದರೆ ಫೇಲಾದೆ ಎಂದು ಹೇಳುವುದಕ್ಕಿಂತ ''ತಿರುಪತಿ'' ಎಂಬ ಪದವನ್ನು ಬಳಸುವುದರ ಮೂಲಕ ತಾನು ಅನುತ್ತೀರ್ಣನಾಗಿರುವುದನ್ನು ಹೇಳುತ್ತಾನೆ. ಯಾರೋ ಒಬ್ಬರು ಒಂದು ಕೆಲಸಕ್ಕೆ ಹೋಗಿರುತ್ತಾರೆ. ಆ ಕೆಲಸ ಆಗುವುದಿಲ್ಲ, ಅವರನ್ನು ನಾವು 'ಏನಾಯಿತು?' ಎಂದು ಕೇಳಿದರೆ ಖಂಡಿತವಾಗಲೂ ಅವರು ''ಮೂರುನಾಮ'' ಅಥವಾ 'ಪಂಗನಾಮ' ಎಂದು ಹೇಳುತ್ತಾರೆ. ಹಣೆಯ ಮೇಲೆ ಮೂರು ಬೆಟ್ಟುಗಳನ್ನು ತಂದು ನಿಲ್ಲಿಸಿ ನಾಮ ಧರಿಸುವ ಅಭಿನಯವನ್ನು ಅವರು ಮಾಡಿ ತೋರಿಸಬಹುದು. ಪರೀಕ್ಷೆಗಳಲ್ಲಿ ಪದೇ ಪದೇ ಫೇಲಾಗುವವರನ್ನು ''ಕಾಶಿಯಾತ್ರೆ ಮಾಡುತ್ತಿದ್ದಾನೆ'' ಎಂದು ಹೇಳುತ್ತಾರೆ. ಯಾರಿಗಾದರೂ ಅವಮಾನವಾದರಂತೂ ''ಮಂಗಳಾರತಿ'' ಆಯಿತು ಎಂದು ಕೂಡಲೆ ಅಂದು ಬಿಡುತ್ತಾರೆ. ಮಂಗಳಾರತಿ ಅವಮಾನ. ಹಾಗಾದರೆ, ಭಕ್ತಾದಿಗಳು ದಿನವೂ ದೇವರುಗಳಿಗೆ ಅವಮಾನ ಮಾಡುತ್ತಿದ್ದಾರೆ ಎಂದು ಅರ್ಥವೋ?

ತಲೆ ಬೋಳಿಸಿಕೊಳ್ಳುವುದು ಒಂದು ಧಾರ್ಮಿಕ ಆಚರಣೆ. ತಲೆ ಬೋಳಿಸಿಕೊಂಡ ಎಂದರೆ ಇನ್ನೊಂದು ಅರ್ಥ ಪೂರ್ತಿ ಕೈಸುಟ್ಟುಕೊಂಡ ಎಂದು. ಶಂಖ ಊದುತ್ತಾನೆ ಎಂಬ ಪದಕ್ಕೂ ಒಳ್ಳೆಯ ಅರ್ಥವಿಲ್ಲ. ಬಲಿಯಾದನು ಎಂದರೆ ಕೊಲೆಯಾದನು ಎಂದೇ ತಿಳಿಯಬೇಕು. ಮಾರಿಯನ್ನು ಭಕ್ತಿಯಿಂದ ಪೂಜಿಸುವ ಜನರೇ ಬಯ್ಯುವಾಗ ''ಮಾರಿ ಮಕದಂಗೆ ನಿನ್ನ ಮಕ'' ಎಂದು ಹೀಯಾಳಿಸುತ್ತಾರೆ. ''ಆಂಜನೇಯನ ಮೂತಿ'' ಎಂದರಂತೂ ಅವನನ್ನು ತ್ರಿಲೋಕ ಸುಂದರ ಎಂದು ಭಾವಿಸಬಹುದು. ರಾಮಾಯಣ, ಹರಿಕಥೆ ಈ ಪದಗಳನ್ನು ತೀರಾ ಸುಲಭವಾದ ಅರ್ಥದಲ್ಲಿ ಬಳಸಲಾಗುವುದು.

*'ಅವತಾರಗಳು' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.*

✤

# ಸಂಕಟದಲ್ಲಿ ವೆಂಕಟರಮಣ

**'ದೇವರು' ವಿಶೇಷ**

**- ಕೃಷ್ಣ ಸುಬ್ಬರಾವ್**

**ಸಂ**ಕಟ ಬಂದಾಗಲೆಲ್ಲಾ ನಾವು ವೆಂಕಟರಮಣನನ್ನು ಮೊರೆ ಹೋಗುತ್ತೇವೆ. ಆದರೆ ವೆಂಕಟರಮಣನಿಗೇ ಸಂಕಟ ಬಂದಾಗ ಏನು ಮಾಡಬೇಕು? ಎಂಬ ಪ್ರಶ್ನೆ ನನ್ನನ್ನು ಬಹಳ ದಿನಗಳಿಂದ ಕಾಡುತ್ತಿದೆ. ಸಂಕಟ ನೋವು ಕೇವಲ ಹುಲುಮಾನವರ ಹಕ್ಕಲ್ಲ. ದೇವರುಗಳಿಗೂ ಅನೇಕ ಸಂಕಷ್ಟಗಳು, ಸಮಸ್ಯೆಗಳು ಬಂದಿರುವುದನ್ನು ಕಂಡಿದ್ದೇವೆ. ದೇವರಿಗೂ ಕಷ್ಟ ತಪ್ಪಿದ್ದಲ್ಲ ಎಂಬುದೇ ನಮ್ಮ ಸಮಾಧಾನ.

**ದೇವರು ಸೃಷ್ಟಿಸುವ ಸಮಸ್ಯೆಗಳಿಗೆ ಅನಕ್ಷರತೆಯೇ ಕಾರಣವೇ?**

ದೇವರು ತನ್ನ ಭಕ್ತರಿಂದಲೇ ಅನೇಕ ತೊಂದರೆಗೆ ಸಿಲುಕಿದ್ದಾನೆ. ತಪಸ್ಸು ಮಾಡಿದ್ದಕ್ಕೆ ಮನಸೋತು ಪ್ರತ್ಯಕ್ಷವಾಗಿ ವರಕೊಟ್ಟು ಅವರು ಕೇಳಿದ ವರ ದಯಪಾಲಿಸಿ ತಾವೇ ರಕ್ಷಣೆಗೆ ಬೇರೆ ದೇವರುಗಳ ಬಳಿ ಓಡಿರುವ ದೃಷ್ಟಾಂತಗಳಿವೆ. ಉದಾಹರಣೆಗೆ, ಮೋಹಿನಿ ಭಸ್ಮಾಸುರನ ಕಥೆ. ಈ ಎಲ್ಲ ಅನವಶ್ಯಕ ಸಮಸ್ಯೆಗಳಿಗೂ ನನಗೆ ಹೊಳೆಯುವ ಮುಖ್ಯ ಹಾಗೂ ಮೂಲಕಾರಣಗಳೆಂದರೆ ದೇವಲೋಕದಲ್ಲಿ ಅನಕ್ಷರತೆ ಅರ್ಥಾತ್ ಅಕ್ಷರಗಳ ಉಪಯೋಗವಿಲ್ಲವಿರುವಿಕೆ. ಗಾಬರಿಯಾಗಬೇಡಿ ನಾನೇನು ಆಧಾರವಿಲ್ಲದೆ ಆರೋಪ ಮಾಡುತ್ತಿಲ್ಲ. ಅನೇಕ ಆದೇಶಗಳಿಗೆ, ವರಗಳಿಗೆ, ಶಾಪಗಳಿಗೆ ಲಿಖಿತ ರೂಪಗಳಿಲ್ಲ. ಎಲ್ಲ ಬಾಯಿಂದಲೇ ಬಂದವು. ವರವಾಗಲಿ, ಶಾಪವಾಗಲಿ, ದಾನವಾಗಲಿ ನೀರಿನ ಮೂಲಕ ಕೊಟ್ಟಿದ್ದೆ. ಆತುರದ ನಿರ್ಧಾರಗಳೆಂದು ಅರಿವಾದಾಗ, ಶಾಪ ಜಾಸ್ತಿಯೆನಿಸಿದಾಗ ಅಥವಾ ಶಾಪಗ್ರಸ್ತ ಅಂಗಲಾಚಿದಾಗ ಶಾಪ ವಿಮೋಚನೆ ಹಾದಿಯನ್ನು ತಿಳಿಸುವುದು ಒಂದು ಮಾರ್ಗ. ಆದರೆ ಯಾವುದೇ ಆದೇಶ ಶಾಪಕ್ಕೆ ಅಮೆಂಡ್‌ಮೆಂಟ್ ಸಾಧ್ಯವಿಲ್ಲ. ಅದಕ್ಕೆ ಕಾರಣ ಲಿಖಿತರೂಪದಲ್ಲಿ ಇಲ್ಲದಿರುವುದು. ಹಾಗಾದರೆ ಬ್ರಹ್ಮನ ವಿಧಿ ಬರಹ? ಎಂದು ಕೇಳಬಹುದು. ಅವನೊಬ್ಬ ಅಪವಾದ. ಹೆಂಡತಿ ಸರಸ್ವತಿ ವಿದ್ಯಾದೇವತೆಯಾಗಿದ್ದರಿಂದಲೋ ಅಷ್ಟೋ ಇಷ್ಟೋ ಕಲಿಕಿರಬಹುದು. ಅದೇನು ಬ್ರಹ್ಮವಿದ್ಯೆಯಲ್ಲ ಎಂದು ಸಾಬೀತುಪಡಿಸುವುದಕ್ಕೆ ಹಾಗೆ ಮಾಡಿರಬಹುದು. ಆದರೆ ಅವನ ಬರಹ ಓದಿ ಅರ್ಥಮಾಡಿಕೊಂಡಿದವರ್‍ಯಾರು. ಏನೂ ಅರ್ಥವಾಗೊಲ್ಲ, ಅದೊಂದು 'ಬ್ರಹ್ಮಲಿಪಿ' ಎಂದು ಜನಪ್ರಿಯವಾಗಿದೆ. 'ವಿಧಿ ಲಿಖಿತ' ಎಂದು ಸುಮ್ಮನಾಗಿ ಬಿಡುತ್ತೇವೆ. ಸೃಷ್ಟಿಕರ್ತನ ಬರಹ

---

### ಬೀಚಿ ಪ್ರಶ್ನೋತ್ತರ

ಪ್ರಶ್ನೆ - ಅಣ್ಣಯ್ಯ ದೇವರ ಮುಂದೆ ಕೂತು ಅಪ್ಪಣೆ ಕೇಳಿದಾಗ ಹೂವು ಬಿತ್ತಲ್ಲ, ಅದು ದೇವರ ಅನುಗ್ರಹದಿಂದ ಬಿತ್ತೋ ಅಥವಾ ನೊಣ ಮುಟ್ಟಿ ಕೆಡವಿತೋ

ಉತ್ತರ - ದೇವರ ಅನುಗ್ರಹದಿಂದ ನೊಣ ಮುಟ್ಟಿ ಹೂವು ಬಿದ್ದಿರಬೇಕಲ್ಲವೇ?

ಅರ್ಥವಾಗದಿದ್ದ ಮೇಲೆ ನಮಗೆ ಮೋಕ್ಷದ ದಾರಿ ತೋರಿಸುವ ವೈದ್ಯರ ಬರಹವೂ ಅರ್ಥವಾಗದಂತಿರಲಿ ಎಂದು ಬ್ರಹ್ಮವೇ ವೈದ್ಯರಿಗೆ ಶಾಪ ಕೊಟ್ಟಿರಲು ಸಾಧ್ಯ!

ಬ್ರಹ್ಮ, ಸರಸ್ವತಿ ಬಿಟ್ಟರೆ ಮಿಕ್ಕ ಯಾವ ದೇವರು ತಾವು ಅಕ್ಷರಸ್ತರೆಂದು ತೋರಿಸಿಕೊಂಡಿಲ್ಲ. ಕುವೆಂಪು ಅವರಿಗೆ ಮಾತ್ರ ದೇವರು ರುಜು ಮಾಡುತ್ತಿದ್ದುದು ಕಾಣಿಸಿದೆ. ಆಗಸದಲ್ಲಿ ಹಾರುವ ಹಕ್ಕಿಗಳನ್ನು ನೋಡಿ ಅದು ದೇವರು ರುಜು ಎಂದು ಕಲ್ಪಿಸಿಕೊಂಡಿದ್ದಾರೆ. ಅದು ಬಿಟ್ಟರೆ ಪ್ರತ್ಯಕ್ಷನಾದಾಗಲೂ ಯಾವ ಭಕ್ತನು ದೇವರ ಆಟೋಗ್ರಾಫ್ ಪಡೆದ ಬಗ್ಗೆ ಮಾಹಿತಿಯಿಲ್ಲ. ಮೂರು ಲೋಕದಲ್ಲೂ ಓಡಾಡುತ್ತಿದ್ದ ನಾರದರ ಕೈಗೆ ದೇವರುಗಳು ಯಾವ ಕಾಗದ ಪತ್ರಗಳನ್ನು ಒಂದು ಲೋಕದಿಂದ ಇನ್ನೊಂದು ಲೋಕಕ್ಕೆ ಕಳುಹಿಸಿದ ದೃಷ್ಟಾಂತವಿಲ್ಲ. ನಾರದನ ಕೊರಿಯರ್ ಸೇವೆ ಉಪಯೋಗ ಮಾಡಬಹುದಿತ್ತು. ಲಿಖಿತ ರೂಪದಲ್ಲಿ ಏನಾದರೂ ಇದ್ದಿದ್ದರೆ ನಾರದನ 'ತಂದು ಹಾಕುವ' ಕಲೆಗೆ ಕಡಿವಾಣ ಹಾಕಬಹುದಿತ್ತೇನೋ.

ದಾಖಲೆಗಳ ವಿಷಯದಲ್ಲಿ ಚಿತ್ರಗುಪ್ತನನ್ನು ಮರೆಯುವ ಹಾಗಿಲ್ಲ. ಪ್ರತಿಯೊಬ್ಬರ ಪಾಪ ಪುಣ್ಯಗಳ ಲೆಕ್ಕವನ್ನಿಟ್ಟವನು. ಅವನೊಬ್ಬ ಅಕ್ಷರಸ್ತನಾಗಿರಲೇಬೇಕು. ಇಲ್ಲದಿದ್ದರೆ ಆ ಪಾಟಿ ರೆಕಾರ್ಡ್ಸ್ ಇಡಲು ಸಾಧ್ಯವಾಗುತ್ತಿರಲಿಲ್ಲ. ಇತ್ತೀಚೆಗೆ ತಾಂತ್ರಿಕ ಬೆಳವಣಿಗೆ ಸಾಕಷ್ಟಾಗಿದ್ದು ಕಂಪ್ಯೂಟರ್ ನೆರವು ಪಡೆದಿರಬಹುದು. ಬಯೋಮೆಟ್ರಿಕ್ ಗುರುತುಳ್ಳ ಆಧಾರಕಾರ್ಡ್ ಇದ್ದರೆ ಬಹುಷಃ ಯಮಧೂತರು ಯಾರನ್ನೋ ಕರೆದುಕೊಂಡು ಹೋಗುವ ಬದಲು ಇನ್ಯಾರನ್ನೋ ಎಳೆದುಕೊಂಡು ಹೋಗುವ ಪ್ರಸಂಗ ನಿಲ್ಲಬಹುದು. ಅದಲ್ಲದೆ ಸಿಸಿ ಟಿವಿ, ಹಿಡನ್ ಕ್ಯಾಮರಾಗಳ ಸಹಾಯದಿಂದ ನಾವು ಮಾಡುವ ಸತ್ಕಾರ್ಯ, ಪಾಪಗಳನ್ನು ಸೆರೆ ಹಿಡಿಯಬಹುದು. ಸ್ವರ್ಗಕ್ಕೆ ಹೋಗಬೇಕಾದವರು ತಪ್ಪು ಮಾಹಿತಿಯಿಂದ ನರಕಕ್ಕೆ ಹೋಗಬೇಕಾದ ಹುನ್ನಾರಗಳನ್ನು ತಡೆಗಟ್ಟಬಹುದು.

ಅಕ್ಷರಜ್ಞಾನ ಈಗ ಅಷ್ಟು ಪ್ರಸ್ತುತವಲ್ಲ. ನಮ್ಮ ಹಳ್ಳಿಯವರೂ ಕೂಡ ಎಲ್ಲ ಸೌಕರ್ಯಗಳನ್ನು ಟಚ್ ಸ್ಕ್ರೀನ್ ಮೂಲಕ ಪಡೆಯುತ್ತಿದ್ದಾರೆ. ಅನಕ್ಷರಸ್ತರು ತಮ್ಮ ಹೆಬ್ಬೆಟ್ಟನ್ನೇ ಬಳಸುತ್ತಿದ್ದ ಕಾಲ ಹೋಯಿತು. ಹೆಬ್ಬೆಟ್ಟು ಈಗ ತನ್ನ ಸಾರ್ವಭೌಮತ್ವ ಕಳೆದುಕೊಂಡಿದೆ. ಎಲ್ಲ ಬೆರಳುಗಳು ಸಮಬಲವಾಗಿವೆ. ಹೀಗಾಗಿ ದೇವಲೋಕದಲ್ಲೂ ಅಕ್ಷರ ಕಲಿಯದೆ ದೇವರುಗಳು ನೆಮ್ಮದಿ ಜೀವನ ನಡೆಸಬಹುದು. ನೇರವಾಗಿ ಕಂಪ್ಯೂಟರ್ ಲಿಟರೇಟ್ ಆಗಬಹುದು.

ದೇವರ ತೀರ್ಪುಗಳು ಇನ್ಮೇಲೆ ಲಿಖಿತ ರೂಪದಲ್ಲಿ ಬಂದರೆ ನಾವು ಅನ್ಯಾಯವಾದಾಗ ಅಪೀಲ್ ಮಾಡಬಹುದು. ತ್ರಿಮೂರ್ತಿಗಳ ತ್ರಿ ಸದಸ್ಯ ಪೀಠಕ್ಕೆ ಮನವಿ ಸಲ್ಲಿಸಬಹುದು.

✤

---

**ಬೀಚಿ ಪ್ರಶ್ನೋತ್ತರ**

ಪ್ರಶ್ನೆ – ದೇವರು ಇದ್ದಾನೆಯೇ?

ಉತ್ತರ – ಇಲ್ಲ ಎಂದು ನಿಮಗನಿಸಿದಲ್ಲಿ ಒಬ್ಬನನ್ನು ಸೃಷ್ಟಿ ಮಾಡಿಕೊಳ್ಳಿ ಅದರಲ್ಲೇ ಸುಖವಿದೆ

# ಶ್ರೀ ಗಣೇಶಾಯ ನಮಃ

**'ದೇವರು' ವಿಶೇಷ**

- ಪಾ.ವೆಂ. ಆಚಾರ್ಯ

**ನ**ಮ್ಮ ಮೂವತ್ತ ಮೂರು ಕೋಟಿ ದೇವತೆಗಳಲ್ಲಿ ಗಣಪತಿ ಅತ್ಯಂತ ಜನಪ್ರಿಯನಾಗಿದ್ದಾನೆ. ದೇಹಸೌಂದರ್ಯದ ವಿಚಾರದಲ್ಲಿ ಗಣಪತಿ ಅಷ್ಟೇನೂ ಆದರ್ಶಪ್ರಾಯನಲ್ಲ. ಇದರ ಅರ್ಥವೆಂದರೆ ನಿಮ್ಮ ಜನಪ್ರಿಯತೆಗೆ ನಿಮ್ಮ ಕುರೂಪ ಅಡ್ಡಬರುವುದಿಲ್ಲ ಎಂದು. ಒಂದು ಮಿತಿಯವರೆಗೆ ವಿಕರಾಳ ರೂಪ ನಿಮ್ಮ ಜನಪ್ರಿಯತೆಗೆ ಪೋಷಕವಾಗಿರುತ್ತದೆ. ವಿಶೇಷವಾಗಿ ಕೊಬ್ಬಿದ ಮೈಯಲ್ಲಿ ಉಬ್ಬಿದ ಹೊಟ್ಟೆ ಯಾವಾಗಲೂ ಜನಪ್ರಿಯತೆಯನ್ನು ಆಕರ್ಷಿಸುತ್ತದೆ. ಗಣಪತಿ ತನ್ನ ರೂಪದ ಬಗ್ಗೆ ಕಿಂಚಿತ್ತಾದರೂ ಅತೃಪ್ತನಾಗಿಲ್ಲ. ಅಲ್ಲೇ ಇದೆ ಅವನ ಜನಪ್ರಿಯತೆಯ ಗುಟ್ಟು. ಕುರೂಪಿಯಾಗಿರುವುದು ಪಾಪವಲ್ಲ, ಕುರೂಪಿಯಾಗಿದ್ದೇವಲ್ಲ ಎಂದು ಹಳಹಳಿಸುವುದು ಪಾಪ.

ಗಣಪತಿ ಉಂಟಾದದ್ದು ನಮ್ಮ ಅನೇಕ ತಮಾಷೆಗಳು ಉಂಟಾದ ರೀತಿಯಲ್ಲಿಯೇ. ಯಾರಿಗೋ ಮಾಡಲು ಏನೂ ಕೆಲವಿರುವುದಿಲ್ಲ ಮತ್ತು ಅದರಿಂದ ಬೇಸರಿಕೆ ಬಂದಿದೆ ತಗೋ ಏನಾದರೊಂದು ವಿಕಲ್ಪ. ಪಾರ್ವತಿಗೆ ಒಂದು ದಿನ ತಲೆಬೇಸರಿಕೆ ಬಂತು ಇದಕ್ಕೆ ಕಾರಣ ಅರಸಲು ದೂರ ಹೋಗಬೇಕಾಗಿಲ್ಲ. ಅವಳ ಗಂಡ ಬಹುಕಾಲದಿಂದ ಮನೆಯ ಕಡೆ ನಿಗಾ ಕಡಿಮೆ ಮಾಡಿದ್ದ. ಇದು ತುಂಬಾ ಅನ್ಯಾಯ. ಅದೂ ಹೆಂಡತಿ ತರುಣಿಯಾಗಿರುವಾಗ. ವಾಸ್ತವಿಕವಾಗಿ ಎರಡನೇ ಹೆಂಡತಿಯೊಡನೆ ಈ ರೀತಿ ವ್ಯವಹರಿಸುವುದು ಎಂದರೆ ಅದು ತೀರಾ ಲೋಕ ವಿರುದ್ಧ.

ಆದರೆ ಶಿವನಿಗೆ ಯಾವಾಗಲೂ ಭಕ್ತರ ಕಾಟ. ಅವರ ಸಂಖ್ಯೆಯೋ ವಿಪರೀತ. ಅವರಿಗೆಲ್ಲ ಬೇಕು ಬೇಕಾದ ವರಗಳನ್ನು ಕೊಡುತ್ತಾ, ಕೆಲವೊಮ್ಮೆ ಅದರಿಂದ ತಾನೇ ತೊಂದರೆ ಪಡುತ್ತಾ ತಿರುಗಾಡುವ ಅವನಿಗೆ ಎರಡನೇ ಹೆಂಡತಿಯ ಸಂಗಡ ಕೂಡಾ ಹೆಚ್ಚು ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ.

ಪರಿಣಾಮವಾಗಿ, ನಾನು ಹೇಳಿದ ಆ ದಿನ ಗಂಡನಿಲ್ಲದ ವೇಳೆ ಮಿತಿಮೀರಿದ ಬೇಸರವನ್ನು ತಾಳದವಳಾದ ಲೋಕಮಾತೆಯು ಕಾಲಹರಣ ಮಾಡಲು ತನ್ನ ಮೈಯ ಬೆವರು ಬೆರೆತ ಕಲ್ಮಶವನ್ನೆಲ್ಲಾ ಕಲೆಹಾಕಿ ಅದರಿಂದ ಒಂದು ಬೊಂಬೆಯನ್ನು ಸೃಷ್ಟಿಸಿದಳು. ಒಂದು ಬೊಂಬೆಯನ್ನು ಮಾಡುವಷ್ಟು ಮಣ್ಣು ಪಾರ್ವತಿಯ ಮೈಯಲ್ಲಿ ಎಲ್ಲಿಂದ ಬಂತು ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಪಾರ್ವತಿಯ ನಿವಾಸವು ಕೈಲಾಸ ಪರ್ವತದಲ್ಲಿತ್ತೆಂದೂ ಅಲ್ಲಿ ಅತಿರೇಕದ ಛಳಿ ಇರುವುದರಿಂದ ಯಾರಾದರೂ ನಿತ್ಯಸ್ನಾನ ಮಾಡಬೇಕೆಂದು ಅಪೇಕ್ಷಿಸುವುದು ತಪ್ಪಾಗುತ್ತದೆಂದೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಅಂತೂ ಬೊಂಬೆ ತಯಾರಾಯಿತು. ಸ್ವಾಭಾವಿಕವಾಗಿಯೇ ಮನುಷ್ಯಾಕೃತಿಯ ಆ ಬೊಂಬೆ ಪಾರ್ವತಿಗೆ ಬಲು ಮುದ್ದಾಗಿ ಕಂಡಿತು. ಯಾವ ಕಲಾವಿದನಿಗೆ ತಾನೇ ತನ್ನ ಕೃತ

ಚೆನ್ನಾಗಿ ಕಾಣಿಸುವುದಿಲ್ಲ! ಆದರೂ ಈ ನಿಟ್ಟಿನಲ್ಲಾದರೂ ಶಿವನು ಮನೆಗೆ ಮರಳಿದ್ದರೆ ಮುಂದಿನ ಕಥೆ ಹಾಗೆಯೇ ಉಳಿಯುತ್ತಿತ್ತೋ ಏನೋ. ಆತ ಮರಳಲಿಲ್ಲ. ಬೊಂಬೆಯನ್ನು ಸುತ್ತೂ ಕಡೆಯಿಂದ ನೋಡಿ ಮೆಚ್ಚುತ್ತಿದ್ದಂತೆ ಕೊನೆಗೊಮ್ಮೆ ಪಾರ್ವತಿಗೆ ಕೋಲ್ಮಿಂಚಿನಂತೆ ಒಂದು ಸ್ಫೂರ್ತಿ ಬಂತು. ಈ ಬೊಂಬೆಗೆ ಜೀವವಿದ್ದರೆ ಚೆನ್ನಾಗಿರುತ್ತಿರಲಿಲ್ಲವೇ? ಅವಳು ಬೊಂಬೆಯ ಬಾಯಲ್ಲಿ ತನ್ನ ಉಸಿರನ್ನು ಊದಿದಳು. ಅದು ನಿಜವಾದ ಹುಡುಗನಾಗಿ ಬಿಟ್ಟಾಗ ಅವಳ ಉತ್ಸಾಹ ಕೇಳಬೇಕೇ?

ಆಮೇಲೆ ಯಾಕೋ ಏನೋ ಪಾರ್ವತಿಗೆ ಸ್ನಾನ ಮಾಡಬೇಕೆಂಬ ಲವಲವಿಕೆ ಹುಟ್ಟಿಕೊಂಡಿತು. ಅವಳು ತನ್ನ ಜೀವಂತ ಬೊಂಬೆಯನ್ನು ಸ್ನಾನದ ಮನೆಯ ಬಾಗಿಲಲ್ಲಿ ನಿಲ್ಲಿಸಿ, ಯಾರನ್ನೂ ಒಳಗೆ ಬಿಡಬೇಡ ಎಂದು ಅಪ್ಪಣೆ ಕೊಟ್ಟು ಬಾಗಿಲು ಮುಂದೆ ಮಾಡಿಕೊಂಡು ಅಭ್ಯಂಜನದಲ್ಲಿ ತೊಡಗಿದಳು. ಒಳಗಿಂದ ಅಗುಳಿ ಹಾಕಿಕೊಂಡಿದ್ದರೆ ಸಾಲುತ್ತಿರಲಿಲ್ಲವೇ? ಬಾಗಿಲಲ್ಲಿ ಕಾವಲು ನಿಲ್ಲಿಸುವ ಅಗತ್ಯವೇನಿತ್ತು? ಇತ್ಯಾದಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ನನಗೆ ಗೊತ್ತಿಲ್ಲ. ಅಗುಳಿ ಮುರಿದಿರಬೇಕೆಂದೂ ಎಷ್ಟು ನೆನಪು ಮಾಡಿಕೊಟ್ಟರೂ ಶಿವನು ಅದನ್ನು ದುರಸ್ತಿ ಮಾಡಿಸಿರಲಿಲ್ಲವೆಂದೂ ಸ್ವಾನುಭವದ ಅಳತೆ ಕೋಲಿನಿಂದ ನಾನು ಊಹಿಸಿದ್ದೇನೆ. ಆದರದು ಬರೀ ಊಹೆ. ಮಾನವರ ಅಳತೆ ಕೋಲಿನಿಂದ ದೇವತೆಗಳನ್ನು ಅಳೆಯುವುದು ಸರಿಯಲ್ಲ ಎಂದು ನಾ ಬಲ್ಲೆ.

ಪಾರ್ವತಿ ಇನ್ನೂ ಪೂರ್ತಿ ಮೈ ತೊಳೆದುಕೊಂಡಿರಲಿಲ್ಲ ಶಿವ ಮಹರಾಯ ಮನೆಗೆ ಬಂದೇಬಿಟ್ಟ. ಬಹಳ ಹೊತ್ತು ಹೊರಗೆ ತಿರುಗಾಡಿ ಮರಳುತ್ತಿರುವಾಗ ಒಮ್ಮೆಲೇ ವಿರಹದ ನೆನಪು ಬಂದು ಹೊಸಲು ದಾಟಿದ ಕೂಡಲೇ ಹೆಂಡತಿಯ ಮೇಲೆ ತನ್ ಸಕಲ ಪ್ರೇಮದ ಸ್ಟಾಕನ್ನೂ ತೀರಿಸಿ ಬಿಡಬೇಕೆನ್ನುವ ಕಳ್ಳ ಮನಸ್ಸಿನ ಗಂಡಂದಿರ ಹಾಗೆ ಶಿವನೂ ಒಳಹೊಕ್ಕೊಡನೇ ಪಾರ್ವತಿಯನ್ನು ಕಾಣಲು ಧಾವಿಸಿದ. ಬಚ್ಚಲು ಮನೆಯ ಬಾಗಿಲಿನಲ್ಲಿ ನಿಂತಿದ್ದ ಹುಡುಗನನ್ನು ಕಂಡು ನಮನಿಮಗಾದರೆ ಮೊದಲು ಈ ಹೊಸಮುಖ ಯಾರು? ಎಂಬ ಪ್ರಶ್ನೆ – ತಲೆಯಲ್ಲಿ ಮೂಡುತ್ತಿತ್ತು. ಆದರೆ ಶಿವ ಭಲೇ ಏಕಾಗ್ರ ಚಿತ್ತ. ಈ ಪ್ರಶ್ನೆ – ಅವನಿಗೆ ಹೊಳೆಯಲೇ ಇಲ್ಲ. ''ಏ ಎಲ್ಲಿದ್ದಾಳೋ ಪಾರ್ವತಿ'' ಅಂತ ಕೇಳಿದ.

ಹುಡುಗ ಬಲು ಘಾಟಿ. ಬಚ್ಚಲ ಮನೆಯ ಮುಚ್ಚಿದ ಬಾಗಿಲನ್ನು ಬೆರಳಿನಿಂದ ತೋರಿಸಿದ. ಈ ಸನ್ನೆ ಭಾಷೆ ಶಿವನಿಗೆ ಮನಸ್ಸಿಗೆ ಬಾರದಿದ್ದುದರಲ್ಲಿ ಆಶ್ಚರ್ಯವಿಲ್ಲ. ಶಿವ ದೇವತೆಗಳಲ್ಲೆಲ್ಲಾ ಸೀದಾ ದೇವರು. ವಿಷ್ಣುವಿನ ಮಾಯಾವಿತನ ಅವನಿಗಿಲ್ಲ. ಆದರೆ ಸಧ್ಯ ಅವನ ಚಿತ್ತ ಪಾರ್ವತಿಯ ಕಡೆಗೆ ವೇಧಿಸಿದ್ದುದರಿಂದ ಆತ ಈ ಹುಡುಗನ ವಕ್ರ ಬುದ್ಧಿಯನ್ನು ಗಮನಿಸದೇ ನೇರವಾಗಿ ಬಚ್ಚಲು ಮನೆಯನ್ನು ಹೋಗಲಿಕ್ಕೇ ಮುನ್ನುಗ್ಗಿದ. ಹುಡುಗನಿಗೆ ಈತ ಪಾರ್ವತಿಯ ಗಂಡ ಎಂದು ಗೊತ್ತಿದ್ದರೆ ಅವನು ಸುಮ್ಮನಿರುತ್ತಿದ್ದನೋ ಏನೋ. ಆದರೆ ಶಿವನನ್ನು ಆತ ನೋಡುವುದು ಅದೇ ಮೊದಲು. ಈ ಅಜ್ಞಾತಪುರುಷನ ದುಡುಕನ್ನು ಕಂಡು ಕೆರಳಿದ ಆತ ಬಾಗಿಲಿಗೆ ಅಡ್ಡ ನಿಂತು ''ಪ್ರವೇಶಿಸಲು ಅಪ್ಪಣೆ ಇಲ್ಲ'' ಎಂದ.

ಶಿವ ತನ್ನ ಜ್ಞಾನದೃಷ್ಟಿಯನ್ನು ತೆರೆದು ನೋಡುವ ತೊಂದರೆ ತೆಗೆದುಕೊಂಡಿದ್ದರೆ ಮುಂದಾಗಲಿದ್ದ ದುರಂತ ತಪ್ಪಬಹುದಾಗಿತ್ತೆಂದು ಪಶ್ಚಾತ್ ಪಾಂಡಿತ್ಯವನ್ನು ಪ್ರಕಟಿಸುವವರಿದ್ದಾರೆ. ಆದರೆ ಒಂದು ಚಿಕ್ಕ ಅಹೇತುಕ ಲೋಪ, ಒಂದು ಚಿಕ್ಕ ಅತಿರೇಕ ದುರಂತಗಳ ರಚನೆಗೆ ಇವೇ ಅಲ್ಲವೆ ಕಚ್ಚಾ ಸಾಮಗ್ರಿ? ತನ್ನ ಮನೆಯಲ್ಲಿ ತನ್ನ ಹೆಂಡತಿಯನ್ನು ಕಾಣಲು ತಾನು ಹೋಗುವಾಗ ಯಾರೋ ಒಬ್ಬ ಹುಡುಗ ತಡೆಯುತ್ತಿದ್ದರೆ ಇದರ ಕಾರಣವೇನೆಂದು ತಿಳಿಯಲು ತನ್ನ ಜ್ಞಾನದೃಷ್ಟಿಯನ್ನು ತೆರೆದು ನೋಡಬೇಕೆಂದು ಶಿವನಿಗೆ ಹೊಳೆಯಲೇ ಇಲ್ಲ. ಶಿವನಲ್ಲಿ ನನಗೆ ಸಂಪೂರ್ಣ ಸಹಾನುಭೂತಿ ಇದೆ. ಇದೇ ಪ್ರಸಂಗದಲ್ಲಿ ನಾನು ಇದ್ದಿದ್ದರೆ ಮತ್ತು ನನಗೆ ಜ್ಞಾನದೃಷ್ಟಿ ಇದ್ದಿದ್ದರೆ ಅದನ್ನು ತೆರೆದು ನೋಡುವ ಗೋಜಿಗೆ ನಾನು ಹೋಗುತ್ತಿರಲಿಲ್ಲವೆಂದು ನನಗನಿಸುತ್ತದೆ.

ಆದರೆ ಮುಂದೆ ಶಿವ ಕೈಗೊಂಡ ಕ್ರಮ ಮಾತ್ರ ತುಸು ದುಡುಕಿನದಾಯಿತೆಂದು ನನ್ನ ಎಣಿಕೆ. ಅವನು ತನ್ನ ತ್ರಿಶೂಲವನ್ನು ಎಳೆದು ಹುಡುಗ ಕೊರಳಿಗೆ ಕೊಟ್ಟ ಏಟಿಗೆ ಅವನ ರುಂಡ ಹಾರಿಹೋಯಿತು. ಅದೇ ಕ್ಷಣಕ್ಕೆ ಪಾರ್ವತಿ ಶುಚಿಸ್ನಾತಳಾಗಿ ಬಚ್ಚಲ ಬಾಗಿಲು ತೆರೆದು ಹೊರಬಂದಳು. ಗಂಡನ ಉಗ್ರಾವತಾರ ಮತ್ತು ತನ್ನ ಬೊಂಬೆಮಗನ ಕಂಬಧಾವಸ್ಥೆಯನ್ನು ನೋಡಿ ಅವಳು ಹುಡುಗನ ಶರೀರದ ಮೇಲೆ ಕುಸಿದುಬಿದ್ದು ಗೋಳಾಡುವಂತಾಯಿತು. ಒಂದು ಮಾತಿನಲ್ಲಿ ಹುಡುಗನನ್ನು ಪುನಃ ಇಡಿ ಮಾಡಿ ಕೊಡುತ್ತೇನೆಂದು ಪಾರ್ವತಿಯನ್ನು ಒಡಂಬಡಿಸಿ ಅವಳ ಕಣ್ಣೀರ ಕಾಲುವೆಯನ್ನು ತಡೆಗಟ್ಟಬೇಕಾದರೆ ಶಿವನಿಗೆ ಏಳೂಹನ್ನೊಂದು ಆಯಿತು. ಮುಂದೇನಾಯಿತೆಂದು ನಿಮಗೆ ಗೊತ್ತು. ಉತ್ತರಕ್ಕೆ ತಲೆ ಹಾಕಿ ಮಲಗಿದವರ ತಲೆಕಡಿದು ತಾ ಎಂದು ಶಿವ ತನ್ನ ಬಂಟನಿಗೆ ಹೇಳಿದ. ಆತ ಎಲ್ಲೆಲ್ಲಿ ಹುಡುಕಿದರೂ ಉತ್ತರಕ್ಕೆ ತಲೆ ಹಾಕಿ ಮಲಗಿದವರನ್ನು ಕಾಣದೆ ಕಡೆಗೆ ಒಂದು ಆನೆ ಹಾಗೆ ಮಲಗಿದ್ದುದನ್ನು ನೋಡಿ ಅದರ ತಲೆ ಕತ್ತರಿಸಿ ತಂದ. ಅದನ್ನು ಹುಡುಗನ ಮುಂಡಕ್ಕೆ ತಗುಲಿಸಿ ಶಿವ ಜೀವಕಳೆ ಊದಿದ, ಇತ್ಯಾದಿ.

ತನ್ನ ಮಾನವಾಕೃತಿಯ ಮಗುವಿಗೆ ಆನೆಯ ತಲೆ ಹಚ್ಚಿದ್ದನ್ನು ನೋಡಿ ಪಾರ್ವತಿಗೆ ಮೆಚ್ಚಿಕೆಯಾಯಿತೋ ಇಲ್ಲವೋ ದಾಖಲೆ ಇಲ್ಲ. ಆದರೆ ತನ್ನ ಪ್ರೀತಿಯ ಮಗನೇ ಇಲ್ಲದಿರುವುದಕ್ಕಿಂತ ಆನೆ ತಲೆಯವನಾದರೂ ಇರಲಿ ಎಂದು ಅವಳು ಸಮಾಧಾನ ಪಟ್ಟುಕೊಂಡಿರಬೇಕೆಂದು ನಾವು ಎಣಿಸಬಹುದು. ಆದರೆ ನನಗೆ ಅರ್ಥವಾಗದಿರುವ ಸಂಗತಿಯೆಂದರೆ ಇದು. ಈ ಹುಡುಗನಿಗೆ ಅವನದೇ ಕಳಚಿದ ರುಂಡವನ್ನು ಹಚ್ಚಲು ಏನು ಆತಂಕವಿತ್ತು? ಆ ರುಂಡ ಏನಾಯಿತು? ಆನೆಯ ರುಂಡವನ್ನೇಕೆ ತರಬೇಕಾಯಿತು. ನನ್ನ ಆರು ವರ್ಷದ ಮಗಳು ಗಣಪತಿಯ ಕಥೆ ಕೇಳಿದಾಗ ಈ ಪ್ರಶ್ನೆಗಳನ್ನು ಎತ್ತುವವರೆಗೆ ನನಗೂ ಅವು ಹೊಳೆದಿರಲಿಲ್ಲ. ನನ್ನೆಣಿಕೆಯಲ್ಲಿ ದೇವತೆಗಳಿಗೆ ಕೆಲವೊಮ್ಮೆ ಸರಳ ವಿಷಯಗಳೇ ಹೊಳೆಯುವುದಿಲ್ಲ. ಸಾಮಾನ್ಯ ಸಮಸ್ಯೆಗಳಿಗೆ ಅಸಾಮಾನ್ಯ ಪರಿಹಾರವನ್ನ ಅವಲಂಬಿಸುವುದರಿಂದಲೇ ಅವರನ್ನು ದೇವತೆಗಳೆಂದು ಕರೆಯುತ್ತಾರೋ ಏನೋ.

ಆದರೆ ವಿಘ್ನರಾಜ, ಸಿದ್ಧಿವಿನಾಯಕ ಮೊದಲಾದ ಅವನ ಅಭಿದಾನಗಳನ್ನು ನೋಡಿದರೆ ನನಗೆ ಬೇರೆಯೇ ಸಂಶಯ ಬರುತ್ತದೆ. ಅವನನ್ನು ನಾಯಕ ಎನ್ನದೆ ವಿನಾಯಕ ಎಂದುದರಿಂದ ಅವನು ಸ್ವತಃ ನಾಯಕನಾಗಿರದೇ ನಾಯಕನ ಹಿಂದಿರುವ ಪ್ರಬಲ ಶಕ್ತಿಯಾಗಿರಬೇಕು. ಸ್ವತಃ ನಾಯಕನಾಗಿರದೇ ವಿಘ್ನವನ್ನು ತಂದೊಡ್ಡಬಲ್ಲವನು ಯಾರು? ಹಳ್ಳಿಯಲ್ಲಿ ಶಾನುಭೋಗ - ಪಟೇಲರಿಗೆ ಅವನು ವಿನಾಯಕ, ಕಲೆಕ್ಟರ್ ಕಛೇರಿಯಲ್ಲಿ ಹೆಡ್ ಮುನಿಷಿ - ಕಾಂಗ್ರೆಸ್ ಕಛೇರಿಯಲ್ಲಿ ಸೆಕ್ರೆಟರಿ, ಕಮ್ಯುನಿಸ್ಟ್ ಪಕ್ಷಗಳಲ್ಲಿ ಜನರಲ್ ಸೆಕ್ರೆಟರಿ ಇವರೆಲ್ಲರೂ ವಿ-ನಾಯಕರು. ಅವರನ್ನು ಪ್ರಥಮ ತೃಪ್ತಿಪಡಿಸದೇ ನಿಮ್ಮ ಕೆಲಸ ಒಂದಂಗುಲ ಕೂಡಾ ಮುಂದೆ ಚಲಿಸದು.

ಗಣಪತಿಯು ಇಂಥಾ ಯಾವನೋ ಒಬ್ಬ ಮಹಾ ಶಾನುಭೋಗನಾಗಿರಬೇಕು. ಅವನು ಬಲು ವೇಗವಾಗಿ ಬರೆಯುತ್ತಿದ್ದುದರಿಂದ ವ್ಯಾಸ ಋಷಿ ಅವನನ್ನು ತನ್ನ ಮಹಾಭಾರತ ಬರೆಯಲು ನೇಮಿಸಿಕೊಂಡನು. ಪಾಂಡವರು ಅವನಿಗೆ ಅಗ್ರ ಪುರಸ್ಕಾರಗಳನ್ನು ಕೊಟ್ಟಿದ್ದರೆಂದು ಕೌರವನು ಕೊಟ್ಟಿರಲಿಲ್ಲವೆಂದು ಪುರಂದರ ದಾಸರು ಹೇಳಿದ್ದಾರೆ. ಬಹಶಃ ಈ ಕಾರಣದಿಂದಲೇ ಅವನು ಮಹಾಭಾರತವನ್ನು ವ್ಯಾಸರು ಹೇಳಿದ ಹಾಗೆ ಬರೆಯದೇ ಕೌರವನ ಪಕ್ಷದ ಒಳ್ಳೇ ಅಂಶಗಳನ್ನು ಮರೆಮಾಡಿ ಪಾಂಡವರನ್ನು ಹಿರಿದು ಮಾಡಿ ಬರೆದಿರಲು ಸಾಕು.

ಗಣಪತಿಯನ್ನು ಶಾನುಭೋಗನನ್ನಾಗಿ ಮಾಡುವ ಮೊದಲು ಶಿವ ಗಣಪತಿಗೂ ಮತ್ತು ಅವನ ಅಣ್ಣ, ಶಿವನ ಹಿರಿಯ ಮಗ ಷಣ್ಮುಖನಿಗೂ ಒಂದು ಪರೀಕ್ಷೆ ಇಟ್ಟ. ವಿಶ್ವವನ್ನು ಯಾರು ವೇಗವಾಗಿ ಒಂದು ಸುತ್ತು ಹಾಕಿ ಬರುತ್ತಾರೋ ಅವರನ್ನು ಶಾನುಭೋಗರನ್ನಾಗಿ ಮಾಡುತ್ತೇನೆ. ಷಣ್ಮುಖ ಒಡನೆಯೇ ಹೊರಟ. ಆದರೆ ಗಣಪತಿ ಶಿವನನ್ನು ಒಂದು ಸುತ್ತು ಹಾಕಿ, ಇಡೀ ವಿಶ್ವವೇ ನಿನ್ನ ಹೊಟ್ಟೆಯಲ್ಲಿ ಅಡಗಿದೆಯಂತಲ್ಲ, ನಿನ್ನನ್ನು ಸುತ್ತಿದರೆ ವಿಶ್ವವನ್ನು ಸುತ್ತಿದ ಹಾಗಾಯ್ತು ಅಂದ. ಷಣ್ಮುಖ ಲೋಕ ಸುತ್ತಿ ಬಂದಾಗ ಗಣಪತಿ ಶಾನುಭೋಗನಾಗಿ ಅದೆಷ್ಟೋ ವರ್ಷಗಳಾಗಿತ್ತಂತೆ.

✤

---

ಬೇಕಾದರೆ ನಂಬು ಇಲ್ಲವಾದರೆ ಬಿಡು
ಲೋಕೋಪಕಾರವೇ ದೇವನಿಹನೆಂದೊಡೆ
ತೂಕಸಮ ಸರ್ವಸಮನ್ವಯ ದೃಷ್ಟಿ
ಅಕ್ಕರದ ಒಡನಾಟ ಇವು ದೇವರೋ ತಿಂಮ

'ದೇವರು' ವಿಶೇಷ

# ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ...

**- ಜೋಗಿ**

**ನ**ಮ್ಮಲ್ಲೂ ಇಂಥ ಅಸಂಖ್ಯಾತ ಪ್ರಾರ್ಥನೆಗಳಿವೆ. ನಮ್ಮ ಪ್ರಾರ್ಥನೆಗಳು ಅನೇಕ ಸಲ ಆರ್ತನಾದಗಳೂ ಆಗಿರುತ್ತವೆ. ದೀಪವೂ ನಿನ್ನದೆ ಗಾಳಿಯೂ ನಿನ್ನದೆ ಆರದಿರಲಿ ಬೆಳಕು ಎಂಬ ಸಾಂಕೇತಿಕ ಪ್ರಾರ್ಥನೆಯಿಂದ ಹಿಡಿದು 'ನಾ ನಿನ್ನ ದಾಸನಯ್ಯಾ... ನೀನೆಲ್ಲ ಕಾಯಬೇಕೋ' ಎಂಬಂಥ ಸ್ಪಷ್ಟ ಪ್ರಾರ್ಥನೆಗಳ ತನಕ ಸಹಸ್ರಾರು ಬೇಡಿಕೆಗಳು ನಮ್ಮ ಮುಂದಿವೆ. ಅವುಗಳ ಪೈಕಿ ಇದೊಂದು ಅಪರೂಪದ ಪ್ರಾರ್ಥನೆ ಕೇಳಿ;

ಅಂಥಿಂಥದೆಲ್ಲವು ಏನೇ ಬರಲಿ
ಚಿಂತಿ ಎಂಬುದೊಂದು ದೂರವಿರಲಿ
ಅಂತು ಪಾರಿಲ್ಲದ ಗುರುದೇವನೊಬ್ಬನ
ಅಂತಃಕರಣೆನ್ನ ಮೇಲಿರಲಿ

ಬಡತನವೆಂಬುದು ಕಡೆತನಕಿರಲಿ
ಒಡವೆ ವಸ್ತುಗಳೆಲ್ಲ ಹಾಳಾಗಿ ಹೋಗಲಿ
ನಡುವೆಯೆ ನಮಗೆ ದಾರಿಯು ತಪ್ಪಲಿ
ಗಿಡಗಂಟಿಯ ಆಸ್ರ ದೊರಕದ್ಹಂಗಾಗಲಿ

ಅಂಬಲಿ ಕೂಡ ಸಿಗದ್ಹಂಗಾಗಲಿ
ನಂಬಿಗಿ ಎಳ್ಳಷ್ಟು ಇಲ್ಲದ್ಹಂಗಾಗಲಿ
ಕಂಬ ಮುರಿದು ತಲೆಮೇಲೇ ಬೀಳಲಿ
ಡಂಭ ಲೌಡಿಮಗ ಇವನೆಂದೆನಲಿ

ಗಂಡಸುತನವಿದ್ದು ಇಲ್ಲದ್ಹಂಗಾಗಲಿ
ಹೆಂಡತಿ ಮಕ್ಕಳು ಬಿಟ್ಹೋಡಲಿ
ಕುಂಡಿಕುಂಡಿ ಸಾಲಗಾರ ಬಂದೊದೆಯಲಿ
ಬಂಡು ಮಾಡಿ ಜನ ನಗುವಂತಾಗಲಿ

ಉದ್ಯೋಗ ವ್ಯಾಪಾರ ನಡೆಯದ್ಹಂಗಾಗಲಿ
ಬುದ್ಧಿ ನನ್ನದು ನಶಿಸಿ ಮಾಸಿ ಹೋಗಲಿ

ಮದ್ದಿಟ್ಟು ಯಾರಾದರೂ ನನ್ನ ಕೊಲ್ಲಲಿ
ಹದ್ದು ಕಾಗಿ ನರಿ ಹರಕೊಂಡು ತಿನ್ನಲಿ

ದಾಸಪಂಥವೊಂದುಳಿಯದಂತಾಗಲಿ
ಆಸೆಮೋಹವೆಲ್ಲ ಅಳಿದುಹೋಗಲಿ
ಲೇಸುಳ್ಳ ಕೂಡಲೂರೇಶನಲಿ ನನ್ನ
ಧ್ಯಾಸವೊಂದು ಮಾತ್ರ ನಿಜವಾಗಿರಲಿ.

ಇದರ ವಿರೋಧಾಭಾಸ ಗಮನಿಸಿ. ಇಲ್ಲಿ ಕೊನೆಯ ಸಾಲಿನ ಬೇಡಿಕೆ ಈಡೇರಿದರೆ ಅದಕ್ಕೂ ಮೊದಲಿನ ಇಪ್ಪತ್ತಮೂರು ಸಾಲುಗಳ ಬೇಡಿಕೆ ಸುಳ್ಳಾಗುತ್ತದೆ. ಮೊದಲ ಇಪ್ಪತ್ತಮೂರು ಸಾಲುಗಳ ಬೇಡಿಕೆ ನಿಜವಾದರೆ ಕೊನೆಯ ಸಾಲಿನ ಬೇಡಿಕೆ ತಾನೇ ತಾನಾಗಿ ಈಡೇರುತ್ತದೆ. ಕೊನೆಯ ಸಾಲಿನ ಬೇಡಿಕೆ ಈಡೇರಿದೊಡನೆ ಉಳಿದೆಲ್ಲ ಸಾಲುಗಳ ಕೋರಿಕೆ ನಶಿಸಿ ಹೋಗುತ್ತದೆ. ಹ್ಯಾಗಿದೆ ಭಕ್ತಿ ಮಾರ್ಗ!

✤



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳ**

- ಚುನಾವಣೆ ಸನ್ನಿಹಿತ. ಅತ್ಯಂತ ಯೋಗ್ಯ ಅಭ್ಯರ್ಥಿಗೆ ಮತ ಹಾಕಲು ನಮ್ಮ ನಿಮ್ಮ ಬಯಕೆ, ಆದರೆ ಅಂತಹ ವ್ಯಕ್ತಿ ಸ್ಪರ್ಧಿಸುವುದೇ ಇಲ್ಲ, ಆದುದರಿಂದ.......
- ನಾನು ತಪ್ಪುಗಳಿಂದ ಕಲಿಯುತ್ತೇನೆ. ಹೌದು ಯಾರೆಲ್ಲ ನನ್ನ ಸಲಹೆಗಳನ್ನು ಪಡೆದು ತಪ್ಪುಗಳನ್ನು ಮಾಡುತ್ತಾರೊ ಅವರಿಂದ ಕಲಿಯುತ್ತೇನೆ.
- ಈ ದಿನಗಳಲ್ಲಿ ಕರೆ ಮಾಡಿದರೆ ಪೊಲೀಸರಿಗಿಂತ ಪಿಝ್ಝಾ ಹುಡುಗರೇ ಮನೆಗೆ ಬೇಗ ಬರುತ್ತಾರೆ.
- A wide screen makes a bad film twice as bad.
- ಒಳ್ಳೆ ಪ್ರಶ್ನೆ ಕೇಳುವುದು ಉತ್ತರ ಹೇಳುವುದಕ್ಕಿಂತ ಕಷ್ಟ
- ಮೌನದ ಮಹಿಮೆ ಹೇಳಲು ನಾವು ಮಾತಿನ ಮೊರೆ ಹೋಗಲೇ ಬೇಕು!

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- 'ಅರ್ಥವಿಲ್ಲದ ಮಾತು' ಎನ್ನುವ ವಾಕ್ಯದಲ್ಲೂ ಸ್ಪಷ್ಟವಾದ ಅರ್ಥವಿದೆಯಲ್ಲ!
- ಟೆಸ್ಟ್ ಪಂದ್ಯ 'ಕಾನೂರು ಹೆಗ್ಗಡತಿ' ಎನ್ನುವುದಾದರೆ 20-20 ಬಾಲಬೋಧೆ.
- Tomorrow is promised to no one.
- ಹೆಂಡತಿ ಟಿವಿ ಮುಂದಿದ್ದ ಗಂಡನಿಗೆ: ನೀವು ನಿದ್ದೆ ಮಾಡುವಿರೊ ಅಥವಾ ಮನಮೋಹನ್ ಸಿಂಗ್ ಭಾಷಣ ಆರಿಸಲೊ?
- ದುಡ್ಡಿದ್ದರೆ ದುಬಾರಿ ನಾಯಿಯನ್ನೇ ಕೊಳ್ಳಬಹುದು ಆದರೆ ಪ್ರೀತಿ ತೋರಿಸಿದರೆ ಮಾತ್ರ ಅದು ಬಾಲ ಅಲ್ಲಾಡಿಸುತ್ತದೆ.
- ಹೈ ಹೀಲ್ಡ್ ಶೂ ಹಾಕಿಕೊಂಡು ನಡೆದಾಡಿದರೆ ಹೆಜ್ಜೆ ಗುರುತು ಬೀಳಿಸುವುದು ಕಷ್ಟ
- The less you talk the more you are listened to.
- ಇಂದು ಯಾವ ಸಮಾಜ ಅತಿ ಕಡಿಮೆ ಸಮಯವನ್ನು ಊಟಕ್ಕೆ ವಿನಿಯೋಗಿಸುತ್ತದೆಯೋ ಆ ಸಮಾಜವನ್ನು ಮುಂದುವರಿದ ಸಮಾಜ ಎಂದು ಗುರುತಿಸುತ್ತಾರೆ.
- ನಾನು ಹೇಳಿದಂತೆ ಮಾಡು ಏಕೆಂದರೆ ನಾನು ಮಾಡುವಂತೆ ಮಾಡಲು ನಿನಗೆ ಸಾಧ್ಯವಾಗುವುದಿಲ್ಲ.

✤

ಹುರುಳಿ ಕಟ್ಟು...

'ದೇವರು' ವಿಶೇಷ

# ಗುಂಪಿನಿಂದ ಆಚೆಗಿನ ಗೋವಿಂದ!

**- ಎಚ್. ಗೋಪಾಲಕೃಷ್ಣ**

**ಆ**ಸ್ತಿಕರು ಹುಟ್ಟಿದ ಎಷ್ಟೋ ವರ್ಷದ ನಂತರ ನಾಸ್ತಿಕರು ಹುಟ್ಟಿದರು. ದೇವರನ್ನು ಆರಾಧಿಸುವ ಎಷ್ಟೋ ಸಂಪ್ರದಾಯಗಳು ಚಲಾವಣೆಗೆ ಬಂದ ನಂತರವೇ ಚಾರುವಾಕ ಹುಟ್ಟಿದ್ದು, ಅವನ ಪಂಥ ಬೆಳೆದದ್ದು. ಅದರಿಂದಲೇ ನಾಸ್ತಿಕರು ಯಾವಾಗಲೂ ಮೈನಾರಿಟಿಗಳು! ಗುಂಪಿನಲ್ಲಿ ಐಡೆಂಟಿಟಿ ಕಾಪಾಡಿಕೊಳ್ಳಲು ಅವರು ಬೇಕಾದಷ್ಟು ದಾರಿ ಹುಡುಕಲೇ ಬೇಕಾಗುತ್ತೆ.

**ದೇವರನ್ನು ನಂಬದ ಇವರು ಪ್ರಸಾದದ ಬಗ್ಗೆ ಮಾತ್ರ ಅಥಾರಿಟಿ!**

ನನ್ನ ಬಂಧು ಒಬ್ಬರು ಇದ್ದಾರೆ. ತುಂಬಾ ಓದಿಕೊಂಡಿರುವುದರಿಂದ ಅವರ ಬಗ್ಗೆ ಎಲ್ಲರಿಗೂ ಒಂದು ರೀತಿಯ ಗೌರವ. ಅವರು ಚಾರುವಾಕರು – ಅಂದರೆ ದೇವರಲ್ಲಿ ನಂಬಿಕೆ ಇಲ್ಲದಿರುವವರು.

ಅವರು ದೇವಸ್ಥಾನಗಳಿಗೆ ಹೋಗುವವರಲ್ಲ, ಮನೆಯಲ್ಲಿ ದೇವರ ಪೂಜೆಯೂ ಇಲ್ಲ ಮತ್ತು ಮದುವೆಯ ನಂತರ ಹೆಂಡತಿ ಕೇಳಿದರು ಅಂತ ದೇವರ ಕೋಣೆ ಬಂದಿದೆ. ಬಂಧುಗಳೊಂದಿಗೆ ಆಚಾರ-ವಿಚಾರ, ನೇಮ ನಿಷ್ಠೆ ನೀತಿ-ನಿಯಮಾವಳಿಗಳನ್ನು ಆಗಾಗ್ಗೆ ಚರ್ಚಿಸುತ್ತಾರೆ. ಅವರ ವಾದಕ್ಕೆ ಸರಿಯಾದ ಉತ್ತರ ನೀಡುವ ಪಾಂಡಿತ್ಯ ಅವರ ಗುಂಪಿನವರಿಗೆ ಇಲ್ಲ. ಮೊದಮೊದಲು ವಾದವಿವಾದಗಳಿಂದ ಮನಸ್ಸು ಮುದುಡುತ್ತಾ ಇತ್ತು. ಮನಸ್ಸು ಮುದುಡುವುದನ್ನು ತಪ್ಪಿಸಿಕೊಳ್ಳಲು ಒಂದು ಉಪಾಯ ಕಂಡು ಹಿಡಿದಿದ್ದಾರೆ.

ದೇವರು ದೇವಸ್ಥಾನಗಳ ಬಗ್ಗೆ ಮಾತು ಬಂದರೆ ಆದಷ್ಟೂ ಇವರು ಮೌನ ತಾಳುತ್ತಾರೆ. ಅಕಸ್ಮಾತ್ ಯಾರಾದರೂ ಅವರ ಅಭಿಪ್ರಾಯ ಕೇಳಿದಾಗ ಅದನ್ನು ತಳಸ್ಪರ್ಶಿಯಾಗಿ ವಿವರಿಸುತ್ತಾರೆ. ನೆಂಟರಿಷ್ಟರ ಜತೆಯಲ್ಲಿ ದೇವರನ್ನು ನೋಡಲು ದೇವಸ್ಥಾನಗಳಿಗೆ ಹೋದರೆ ಸುಮ್ಮನೆ ದೇವರ ಮುಂದೆ ನಿಲ್ಲುತ್ತಾರೆ: ತೀರ್ಥ ಪ್ರಸಾದ ವಿನಿಯೋಗವಾಗುವ ಕಡೆ ಇವರು ಇರಲೇ ಬೇಕಿದ್ದಲ್ಲಿ ಇರುತ್ತಾರೆ. ಪ್ರಸಾದ ಮಾತ್ರ ಖುಷಿಯಿಂದ ತಿನ್ನುತ್ತಾರೆ. ಯಾವುದೇ ದೇವಸ್ಥಾನದಲ್ಲಿನ ಪ್ರಸಾದದ ಬಗ್ಗೆ ಅವರು ಒಂದು ಅಥಾರಿಟಿ!

ನೆಂಟರು, ಹೆಂಡತಿ ಇವರುಗಳ ಜತೆ ಪುಣ್ಯ ಕ್ಷೇತ್ರಗಳಿಗೆ ಹೋದರೆ ಅಲ್ಲಿನ ದೇವಾಲಯಗಳ ಬಗ್ಗೆ ವಿವರ ಸಂಗ್ರಹಿಸುತ್ತಾರೆ, ಸ್ಥಳಪುರಾಣ ಕೇಳಿ ತಿಳಿಯುತ್ತಾರೆ ಮತ್ತು ದೇವಸ್ಥಾನದ ಒಳಗೆ ದೇವರ ಅಲಂಕಾರ ದೇವರ ಮೂರ್ತಿಯ ರಚನೆ, ಕಲೆ ಇದರ ಬಗ್ಗೆ ಗಮನ ಹರಿಸುತ್ತಾರೆ. ದೇವರನ್ನು ನೋಡಲು ಬಂದರು, ಪುಣ್ಯ ಕ್ಷೇತ್ರ ದರ್ಶನ ಮಾಡಿದರು,

ನಮ್ಮ ಹಾಗೇ ಅವರೂ ಅಂತ ಅನಿಸಿದರೂ ಇವರು ಗುಂಪಿನಿಂದ ಆಚೆಗಿನ ಗೋವಿಂದ!

ಸಂಧ್ಯಾವಂದನೆ, ಪೂಜೆ ಪುನಸ್ಕಾರ... ಇವುಗಳ ಆಕರ್ಷಣೆ ಅಥವಾ ಇವುಗಳನ್ನು ಮಾಡಲೇ ಬೇಕು ಅನ್ನುವ ಒತ್ತಡ ಇಲ್ಲವಾದ್ದರಿಂದ ಅವರು ಉಪನಯನ ಮಾಡಿಕೊಳ್ಳಲೇ ಇಲ್ಲ. ಹಾಗೇ ಮದುವೆಯೂ ಆಯಿತು, ಮಕ್ಕಳೂ ಆದವು. ಅವರ ತಾಯಿ ತೀರಿಕೊಂಡಾಗ ಒಂದು ಸಂದಿಗ್ಧಕ್ಕೆ ಒಳಗಾದರು. ವೈದೀಕ ಕರ್ಮ ನಡೆಸಲು ಹಿರಿಯ ಅಥವಾ ಕಿರಿಯ ಮಗಮಾತ್ರ ಅರ್ಹರು ಅಂತ ಶಾಸ್ತ್ರಿಗಳು ಹೇಳಿದರು. ಆಗತಾನೇ ಹಿರಿಯವರು ಖಾಯಿಲೆ ಬಿದ್ದು ಚೇತರಿಸಿಕೊಳ್ಳುತ್ತಿದ್ದರು. ಉಳಿದವರು ಇವರೇ. ಒಂದು ನಿಮಿಷ ಮೂಲೆಯಲ್ಲಿ ನಿಂತು ಯೋಚಿಸಿದ ಇವರು ಪುರೋಹಿತರ ಮುಂದೆ ನಿಂತು ಹೇಳಿದರು – ನಾನೇ ಮುಂದಿನ ಕರ್ಮ ಮಾಡ್ತೀನಿ, ಆದರೆ ನನಗೆ ಉಪನಯನ ಆಗಿಲ್ಲ, ಅದಕ್ಕೇನಾದರೂ ಶಾಸ್ತ್ರದಲ್ಲಿ ಪರಿಹಾರೋಪಾಯ ಇದೆಯೇ?

ತಾಯಿ ಪಾರ್ಥಿವ ಶರೀರ ಹಾಲಿನಲ್ಲಿತ್ತು. ಇವರನ್ನ ಅಡಿಗೆ ಮನೆಯಲ್ಲಿ ಕೂಡಿಸಿ ಪುರೋಹಿತರು ತಾತ್ಕಾಲಿಕ ಯಜ್ಞೋಪವಿತ್ರ ಧಾರಣಂ.... ಅಂತ ಮಂತ್ರ ಹೇಳಿ ಅವರಿಗೆ ಮುಂಜಿ ಮಾಡಿದರು! ಅವರು ಕರ್ಮ ಮಾಡಬೇಕಾದರೆ ನಂಟರು ಯಾರೋ ಛೇಡಿಸಿದರಂತೆ – ಏನೋ ದೇವರೇ ಇಲ್ಲ ಅಂತಿದ್ದೆ... ಈಗ ಏನು ಹೇಳ್ತೀ?

'ಈಗಲೂ ಅದನ್ನೇ ಹೇಳ್ತೀನಿ, ಇದನ್ನೆಲ್ಲಾ ಮಾಡ್ತಿರೋದು ದೊಡ್ಡಣ್ಣನಿಗೆ ಮತ್ತೆ ತೊಂದರೆಯಾಗದೇ ಇರಲಿ ಅಂತ. ಹುಷಾರು ಇಲ್ಲದೇ ಇರೋರಿಗೆ ಮತ್ತೆ ತೊಂದರೆ ಕೊಡಬಾರದು ಅಂತ. ಅದು ಮನುಷ್ಯತ್ವ ಅಲ್ಲ ಅಂತ ಗೊತ್ತಾಯ್ತಾ? ನಿಮ್ಮ ದೇವರೇನಾದರೂ ಈಗ ಪ್ರತ್ಯಕ್ಷ ಆಗಿಬಿಟ್ಟರೆ ಆತನಿಗೂ ನಾನು ಇದನ್ನೇ ಹೇಳೋದೂ...'

✤

---

**ದೇವರ ದಿನಚರಿ... 8ಕ್ಕೆ ಎಲ್ಲೆಡೆ ಇರಬೇಕು. 8.30ಕ್ಕೆ ಎಲ್ಲೆಡೆ ಇರಬೇಕು... 9ಕ್ಕೆ ಎಲ್ಲೆಡೆ ಇರಬೇಕು. 9.30ಕ್ಕೆ ಎಲ್ಲೆಡೆ ಇರಬೇಕು. 10ಕ್ಕೆ ಎಲ್ಲೆಡೆ ಇರಬೇಕು...**




ಇಂಟರ್‌ನೆಟ್‌ನಿಂದ....

'ದೇವರು' ವಿಶೇಷ

# ಪ್ರಶಸ್ತಿ ಲಾಸ್ಟ್ ಅಂಡ್ ಫೌಂಡ್

**- ಪ್ರಶಾಂತ ಆಡೂರ**

**ಮೊ**ನ್ನೆ ಬನಶಂಕರಿ ನವರಾತ್ರಿಗೆ ನಾ ಸಹ-ಕುಟುಂಬ ಪರಿವಾರದೊಂದಿಗೆ ಅಂದರ ನನ್ನ ಅಫಿಶಿಯಲ್ ಕುಟುಂಬ ಕರಕೊಂಡು ಬನಶಂಕರಿಗೆ ಹೋಗಿದ್ದೆ. ಬನಶಂಕರಿ ನಮ್ಮನಿ ಕುಲದೇವರು. ಹಿಂಗಾಗಿ ವರ್ಷಕ್ಕೊಮ್ಮೆ ನವರಾತ್ರಿಗೆ ಸ್ವಂತ ಗಾಡಿ ಖರ್ಚ ಮಾಡಕೊಂಡ ಹೋಗಬೇಕಂತ ಅದಕ್ಕ ಹೋಗಿದ್ದೆ.

ಒಳಗ ಗರ್ಭಗುಡ್ಯಾಗ ಸೀರಿ ಉಡಿತುಂಬಿ, ಮಂಗಳಾರತಿ, ಅಭಿಷೇಕ ಮಾಡಿಸಿ ಹೊರಗ ಬರೋದರಾಗ ನನ್ನ ನಾಲ್ಕ ವರ್ಷದ ಮಗಳ ಪ್ರಶಸ್ತಿ ಕಳಕೊಂಡ ಬಿಟ್ಟಿದ್ಲು. ಅತ್ತಲಾಗ ಇತ್ತಲಾಗ ಎಲ್ಲೇ ನೋಡಿದರು ಕಾಣಲಿಲ್ಲಾ.

> **ಎಲ್ಲಿ ಹೋದಳು ಮಗಳು ಎಂದು ಹುಡಕ್ಲಿಕ್ಕೆ ಹತ್ತಾಗ...**

"ರ್ರಿ, ಆಕಿ ಅಲ್ಲೆ ಗರ್ಭಗುಡಿ ಒಳಗ ಇರಬೇಕು, ಹೋಗಿ ನೋಡ್ಕೊಂಡ ಬರ್ರಿ, ಮಗಳ ಕಡೆ ಲಕ್ಷ ಇರಲಿ ಅಂದರ ಕಣ್ಣ ಮುಚಗೊಂಡ ದೇವರ ಮುಂದ ನಿಂತ ಬಿಟ್ಟರಿ" ಅಂತ ನನ್ನ ಹೆಂಡತಿ ನಂಗ ಬೈಲಿಕತ್ಲು.

ನಾ ಗರ್ಭ ಗುಡಿಯಿಂದ ಹೊರಗ ಬಂದ ದಾರಿಲೇನ ಒಳಗ ಹೋಗಲಿಕ್ಕೆ ಭಟ್ಟರ ಬಿಡಂಗಿಲ್ಲಾ ಅಂತ ಮತ್ತ ಪಾಳೇ ಹಚ್ಚಿ ಒಳಗ ಹೋಗಿ ನೋಡಿದ್ರ ಅಲ್ಲೇನ ನನ್ನ ಮಗಳ ಕಾಣಲಿಲ್ಲಾ.

ನಾ ಬನಶಂಕರಿನ್ನ ಬಿಟ್ಟ ಅಲ್ಲಿದ್ದವರಿಗೆಲ್ಲಾ ಕೇಳಿದೆ 'ಯಾವದರ ಸಣ್ಣ ಹುಡಗಿ, ಕೆಂಪ ಫ್ರಾಕ್ ಹಾಕೊಂಡೊಕಿನ್ನ ನೋಡಿರೇನು' ಅಂತ. ಒಂದಿಷ್ಟ ಮಂದಿ ಇಲ್ಲಾ ಅಂದರು. ಇನ್ನ ಕೆಲವೊಬ್ಬರು ನನ್ನಂಗ ದೇವರ ಮುಂದ ಮಕ್ಕಳ ಖಬರ ಇಲ್ಲದ ಕಣ್ಣಮುಚಗೊಂಡ ನಿಂತವರು ಕಣ್ಣ ತಗದ ತಮ್ಮ ಮಕ್ಕಳನ ಹುಡಕಲಿಕತ್ತರು.

ನಾ ಮತ್ತ ಹೊರಗ ಬಂದ ನೋಡಿದ್ರ ನನ್ನ ಮಗಳದು ಇನ್ನೂ ಪತ್ತೇ ಇರಲಿಲ್ಲಾ. ಮೊದ್ಲ ಬನಶಂಕರಿ ನವರಾತ್ರಿ ಗದ್ಲ ಬ್ಯಾರೆ. ನನ್ನ ಹೆಂಡತಿ ಮಾರಿ ಸಣ್ಣಾತ, ಇನ್ನೇನ ಅಳೋದ ಒಂದ ಬಾಕಿ ಇತ್ತ.

"ರ್ರಿ, ಮುಂದ ಹೆಂಗರಿ?" ಅಂದ್ಲು.

"ನಾ ಅದಕ್ಕ ಹೇಳಿದ್ದೆ, ಆಪರೇಷನ್ ಮಾಡಸೋದ ಬ್ಯಾಡಾ ಅಂತ ನನ್ನ ಮಾತ ಎಲ್ಲೆ ಕೇಳಿದಿ. ಎರಡನೇದ ಹಡೀಯೊ ಪುರಸೊತ್ತ ಇಲ್ಲದ ಆಪರೇಶನ್ ಮಾಡಿಸಿಗೊಂಡ ಬಂದಿ. ಇನ್ನ ಮುಂದಿಂದ ದೇವರ ಇಚ್ಛೆ ತೊಗೊ" ಅಂದೆ.

ನನ್ನ ಮಾತ ಕೇಳಿ ನನ್ನ ಹೆಂಡತಿ ಸಿಟ್ಟಲೆ 'ಯಾ ಹೊತ್ತಿನಾಗ ಏನ ಮಾತಾಡಬೇಕು, ಅದು ಎಲ್ಲೇ ಅಂತ ನಿಮಗ ಗೊತ್ತಾಗಂಗಿಲ್ಲಾ' ಅಂತ ಸಾಕ್ಷಾತ ಶಾಕಾಂಬರಿ ಮೈಯಾಗ ಬಂದೊರಗತೆ ಒದರಲಿಕತ್ತು. ನನಗ ಅಕಿ ಹಂಗ ಒದರೋದ ನೋಡಿ ಎಲ್ಲೆ ಗುಡಿಗೆ ಬಂದ ಜನಾ ಇಕಿ ಮೈಯಾಗ ಬನಶಂಕರಿ ಬಂದಾಳ ಅಂತ ಇಕಿಗೆ ನಮಸ್ಕಾರ ಮಾಡಿ ಉಡಿ ತುಂಬಲಿಕ್ಕೆ ಪಾಳಿ ಹಚ್ಚತಾರೋ ಅಂತ ಹೆದರಕಿ ಹತ್ತ.

ನಾ ನನ್ನ ಹೆಂಡತಿಗೆ ''ಏ, ಪ್ರಶಸ್ತಿ ಕಾಲಾಗ ಗೆಜ್ಜಿ ಹಾಕೊಂಡಿದ್ಲೇನ?'' ಅಂತ ಕೇಳಿದೆ.

ಅಕಿ ''ಹೌದು, ಯಾಕ?'' ಅಂದ್ಲು.

''ಅಲ್ಲಲೇ, ನಿಂಗೊತ್ತಿಲ್ಲಾ? ಬನಶಂಕರಿ ವಕ್ಕಲ ಇದ್ದೋರ ಮನ್ಯಾಗ ಹೆಣ್ಣಮಕ್ಕಳ ಗೆಜ್ಜಿ ಹಾಕೋ ಬಾರದು ಅಂತ, ಹಂಗ ಗೆಜ್ಜಿ ಹಾಕ್ಕೊಂಡರ ದೇವಿ ಆ ಕೂಸಿನ್ನ ನುಂಗತಾಳ ಅಂತ ಕಥಿ ಅದ ಕೇಳಿ ಇಲ್ಲೋ'' ಅಂದೆ.

ನನ್ನ ಹೆಂಡತಿಗೆ ಮತ್ತ ಪಿತ್ತ ನೆತ್ತಿಗೇರತು.

''ರ್ರಿ, ನಮ್ಮ ಸ್ವಂತ ರೊಕ್ಕದಲ್ಲೇ ಗೆಜ್ಜಿ ಹಾಕ್ಕೋಬಾರದು, ಬ್ಯಾರೆ ಯಾರರ ಕೊಡಸಿದರ ಹಾಕೊಬಹುದು. ಈ ಗೆಜ್ಜಿ ನಮ್ಮವ್ವ ಕೊಡಸಿದ್ದು'' ಅಂದ ದೇವರಿಗೆ ಕೈಮುಗದ ''ತಾಯಿ ಬನಶಂಕರಿ, ನನ್ನ ಮಗಳ ಸಿಗೋತನಕ ಎಲ್ಲೆ ಇರಲಿ ಆರಾಮ ಇರಲಿವಾ, ನಿನಗ ಸೀರಿ ಉಡಸತೇನಿ'' ಅಂತ ಬೇಡ್ಕೊಂಡಳು. ನಂಗ ತಲಿ ಕೆಟ್ಟತ, ಈಗ ಒಂದ ತಾಸ ಹಿಂದ ಬನಶಂಕರಿಗೆ ಸೀರೆ ಉಡಿಸಿ ಬಂದೇನಿ ಇಕಿ ಏನ ಮತ್ತ ಸೀರಿ ಉಡಸ್ತೇನಿ ಅಂತ ಬೇಡ್ಕೋಳಿಕತ್ತಾಳಲಾ ಅಂತ ಸಿಟ್ಟಬಂತ.

ಮೊದ್ಲ ನಮ್ಮ ಮಂದ್ಯಾಗ ಕನ್ಯಾ ಕಡಿಮೆ ಅವ ಯಾರರ ಗಂಡಸ ಮಗನ ಹಡದವರು ತಮ್ಮ ಮಗಗ ಸೆಟ್ ಮಾಡ್ಕೊಂಡ ಕರಕೊಂಡ ಹೋದರೊ ಏನೋ ಅನ್ಕೋತ ನಾ ನನ್ನ ಮಗಳನ್ನ ಸಿರಿಯಸ್ ಆಗಿ ಹುಡಕಲಿಕತ್ತೆ. ನಾ ಅಕಿನ್ನ ಹುಡಕೊತ ಹಿಂಗ ಎರಡ ಸುತ್ತ ಪ್ರದಕ್ಷಿಣೆ ಹಾಕೋದರಾಗ ಅಕಿ ಹಿಂದಿನಿಂದ 'ಪಪ್ಪಾ' ಅಂತ ಓಡಿ ಬಂದ್ಲು.

''ದನಾ ಕಾಯೋಕಿನ ಎಲ್ಲಿ ಹೋಗಿದ್ದಿ'' ಅಂತ ಕೇಳಿದರ ''ನಾ ಅಲ್ಲೇ ಗುಡಿ ಕಟ್ಟಿ ಮ್ಯಾಲೆ ಪೋಲಿಯೊ ಹಾಕಲಿಕತ್ತಿದ್ದರು, ಪಾಳೆ ಹಚ್ಚಿ ಪೋಲಿಯೋ ಹಾಕಿಸಿಗೊಂಡ ಬಂದೆ'' ಅಂದ್ಲು.

ನನ್ನ ಮಗಳಿಗೆ ಆ ಪೋಲಿಯೋ ಔಷಧ ಭಾಳ ಸೇರತದ ಹಿಂಗಾಗಿ ಅಕಿ ಎಲ್ಲೇರ ಪೋಲಿಯ ಹಾಕಲಿಕತ್ತಿದ್ದರು ಅಂದರ ತಪ್ಪಸಲಾರದ ಹಾಕಿಸಿಗೊಂಡ ಬರತಾಳ. ಇರಲಿ ಒಟ್ಟ ಮಗಳ ಸಿಕ್ಕಳಲಾ, ಇನ್ನೊಂದು ಹಡೆಯೋದು ತಪ್ಪತು ಅಂತ ಬನಶಂಕರಿಗೆ ಇನ್ನೊಂದು ಕಾಯಿ ಒಡಸಿಗೊಂಡ ಹುಬ್ಬಳ್ಳಿ ಹಾದಿ ಹಿಡದ್ವಿ.

ನನ್ನ ಹೆಂಡತಿ ಮತ್ತೊಮ್ಮೆ ದೇವರಿಗೆ ಅಡ್ಡಬಿದ್ದ 'ಮುಂದಿನ ಸಲಾ ಜೋಡ ಸೀರಿ ಉಡಸ್ತೇನಿ ತೊಗೊವಾ ನಮ್ಮವ್ವಾ' ಅಂದ ನನ್ನ ಬೆನ್ನ ಹತ್ತಿದ್ಲು.

✤

# ದೇವರ ಕೆಲಸ

**‘ದೇವರು’ ವಿಶೇಷ**

**- ಇ.ಆರ್. ರಾಮಚಂದ್ರನ್**

**ಅ**ಜ್ಜಿ ಎಂದಿಗಿಂತ ಮುಂಚೆಯೇ ಪೂಜೆ ಮುಗಿಸಿ ಬಂದು ಕೂತರು. ಪೂಜೆ ಮುಗಿಸಿ ‘ಪ್ರಜಾವಾಣಿ’ ತಿರುವು ಹಾಕುವುದು ಅಜ್ಜಿಯ ರೊಟೀನು.

‘ಏನಜ್ಜಿ.. ಇವತ್ತು ದೇವ್ರ ಪೂಜೆ ಇಷ್ಟು ಬೇಗ ಮುಗಿಸಿದೆ.... ಏನೇನು ಬೇಕೋ ಎಲ್ಲಾ ಕೇಳಿದಿಯಾ? ಯಾವಾಗ ಕೊಡ್ತಾನೇಂತ ಟೈಮ್ ಫ್ರೇಮ್ ಏನಾದ್ರೂ ಕಮಿಟ್ ಮಾಡೀದಾನಾ ದೇವರು?’ ಎಂದು ಕೆಣಕಿದೆ.

‘ನಿನ್ನ ತಲೆ! ದೇವರಿಗೆ ಬೇರೆ ಕೆಲಸವಿಲ್ವಾ? ನಮ್ಮೆಲ್ಲರ ಬೇಡಿಕೆಗಳನ್ನು ಪೂರೈಸೋದೇನಾ ಕೆಲಸ?’

ಅಜ್ಜಿ ನರೇಂದ್ರ ಮೋದಿಯ ಹಾಗೆ ಒಳ್ಳೇ ಫಾರ್ಮಲ್ಲಿದ್ದರು!

**ನಮ್ಮೆಲ್ಲರ ಬೇಡಿಕೆಗಳನ್ನು ಪೂರೈಸೋದಷ್ಟೇ ದೇವರ ಕೆಲಸವೆ?**

‘ಹಾಗಾದ್ರೆ ದಿನಾ ಬೆಳಿಗ್ಗೆ ದೇವ್ರ ಹತ್ರ ನಿಂದು ಏನು ಡೈಲಾಗ್ ಅಜ್ಜಿ?’

‘ನನ್ನ ಪೂಜೆ ಮಾಡ್ತಿದಾಳೆ.. ಇವ್ಳು ಒಳ್ಳೇವ್ಳು, ಇವಳು ಕೇಳಿದ್ದನ್ನು ಕೊಟ್ಟು ಸ್ವರ್ಗಕ್ಕೆ ಕರೆಸೋಣ; ಪೂಜೆ ಮಾಡ್ದಿದ್ರೆ ಇವಳು ಕೆಟ್ಟವಳು ಇವಳಿಗೆ ರೌರವ ನರಕ ಕೊಡೋಣ ಅನ್ನೋ ಲೆಕ್ಕಾಚಾರಿ ಅಲ್ವೋ ದೇವ್ರು!’

‘ಹಾಗಾದ್ರೆ ದೇವ್ರನ್ನ ಯಾತಕ್ಕೆ ಪೂಜಿಸ್ತಿ?’

‘ನಾವು ಉಪ್ಪು ಹುಳಿ ತಿನ್ನೋ ಪುಳಿಚಾರಿಗಳು! ನಮ್ಮಿಂದ ತಿಳಿದೋ, ತಿಳಿಯದೆಯೋ ದಿನವೂ ಎಷ್ಟೋ ತಪ್ಪುಗಳು ನಡೀತಿರುತ್ತೆ. ಅದಕ್ಕೆ ಕ್ಷಮಿಸಪ್ಪಾಂತ ಬೇಡ್ಕೊಳ್ಳೋದು. ಮತ್ತೆ ಮತ್ತೆ ತಪ್ಪುಗಳು ಮಾಡ್ದೇ ಇರೋ ಹಾಗೆ ಬುದ್ಧಿ ಕೊಡಪ್ಪಾಂತ ಕೇಳ್ಕೊಳ್ಳೋದು. ನಮ್ಮ ಕೋಪ, ಸಿಡುಕು ಸ್ವಭಾವದಿಂದ ನಾವು ಎಷ್ಟೋ ಸರ್ತಿ ಯಾರ್ನೋ ನೋಯಿಸಿರ್ತೀವಿ. ಆದರೆ ಅವರ ಹತ್ತಿರ ಕ್ಷಮಾಪಣೆ ಕೇಳೋ ಧೈರ್ಯ ಇರೋದಿಲ್ಲ! ಆವಾಗ ದೇವ್ರ ಹತ್ತಿರ ಮೊರೆ ಹೋಗಿ ಮಧ್ಯಸ್ತಿಕೆ ಮಾಡ್ಲಕ್ಕೆ ಪ್ರಯತ್ನ ಅಂತಿಟ್ಕೊ.’

‘ಅಂದರೆ ದೇವ್ರ ಹತ್ತಿರ ಅದೂ ಇದೂ ಕೊಡು ಅಂತ ಕೇಳ್ಕೊಂಡ್ರೆ ಏನೂ ಪ್ರಯೋಜನ ಇಲ್ಲಾಂತಿಯಾ?’

‘ಯಾಕೆ ಪರೀಕ್ಷೇಲೀ ಚೆನ್ನಾಗಿ ಮಾಡಿಲ್ವೇನೋ? ನೀನು ಗೀಚಿರೋ ಪೇಪರ್ನ ದೇವ್ರು ಹೇಗೋ ಸರಿ ಮಾಡಿ ನಿನ್ನ ಪಾಸ್ ಮಾಡಿಸ್ಬೇಕು. ಅದಕ್ಕೆ ದಿನಾ ದೇವಸ್ಥಾನಕ್ಕೆ ಹೋಗಿ ದೇವರ್ನ ಕೇಳ್ಕೊಳ್ತಿದೀಯಾ, ಸರಿ ತಾನೇ!’ ಎಂದು ಕೇಳಿದಾಗ ಅಜ್ಜಿ ನಿಮ್ಹಾನ್ಸ್‌ನಲ್ಲಿ ಸೈಕಾಲಜಿಸ್ಟ್ ಆಗಿರ್ಬೇಕಾಗಿತ್ತು. ಅಪ್ಪಿ ತಪ್ಪಿ ನಮ್ಮನೇಲಿ ಅಜ್ಜಿಯಾಗಿ ಹುಟ್ಟಿದಾರಷ್ಟೆ ಎನ್ನಿಸಿತು.

ಅಜ್ಜಿ ಸ್ಪೀಚ್ ಮುಂದುವರಿಯಿತು..

'ಹುಟ್ಟಿದ್ಮೇಲೆ ಕಷ್ಟ, ಸುಖ ಬರದೇ ಇರುತ್ಯೇ? ಕಷ್ಟ ಬಂದಾಗ ಅದನ್ನು ತಡ್ಕೋಳಕ್ಕೆ ಶಕ್ತಿ ಕೊಡಪ್ಪಾಂತ ಕೇಳ್ತೀನಿ. ಇನ್ನೊಂದು ವಿಷಯ ತಿಳ್ಕೊ! ದೇವ್ರಿಗೆ ಲಂಚ ಕೊಡಕ್ಕೆ ಆಗಲ್ಲ. ಈಗ ನೋಡು... ಲಂಚ ತೊಗೋಳೋವ್ರು ಕೊಡೋವ್ರು ಬೀದ್ಬೀದೀಲಿ ಸಿಗ್ತಾರೆ. 'ನಿನಗೆ 50 ಕೋಟಿ ಕಿರೀಟ ಹಾಕಿದೀನಿ; ನನ್ನ ಕಂಪನಿ ಚೆನ್ನಾಗಿ ಓಡ್ಸಿದ್ರೆ ನಿನಗೆ ಒಂದು ಚಿನ್ನದ ಮೈನಿಂಗ್ ಕಂಪನಿ ತೆಗೀತೀನಿ.' ವೈಷ್ಣೋದೇವಿಗೆ ಹೋಗಿ, 'ತಾಯೇ! ಮತ್ತೆ ಮತ್ತೆ ಇಲ್ಲಿಗೆ ಬಂದು ನಿನ್ನ ಪೂಜೆ ಮಾಡ್ತಿದೀನಿ, ನನ್ನ ಕುರ್ಚಿ ಮಾತ್ರ ಉಳಿಸ್ಕೊಡು. ಅದನ್ನು ಮಾಡ್ಕೊಟ್ಟರೆ ನಿನ್ಗೊಂದು ಜೊತೆ ಚಿನ್ನದ ಕುರ್ಚಿ ಹಾಕಿಸ್ತೀನಿ!' 'ತಿರುಪತಿ ತಿಮ್ಮಪ್ಪ, ನನ್ನ ಹುಟ್ಟಿದ ಹಬ್ಬಕ್ಕೆ ನಿನಗೆ ಕೋಟಿ ಕೋಟಿ ವಜ್ರ, ವೈಢೂರ್ಯ ಹಾಕಿದೀನಿ, ಜ್ಞಾಪಕವಿರ್ಲಿ! ನನ್ನ ಪತಾಕೆ ಮತ್ತೆ ಹಾರಾಡೋ ಹಾಗೆ ಮಾಡಿದ್ರೆ ನಿನಗೆ ಸ್ಪೆಷಲ್ಲಾಗಿ ಒಂದು ಬಂಗಾರದ ಪ್ಲೇನ್ ಮಾಡ್ಸಿ ನಾನೇ ಖುದ್ದಾಗಿ ಅದನ್ನು ತಿರುಪತಿಯ ಮೇಲೆ ಹಾರಿಸ್ತೀನಿ..!'

'ಹ ಹ ಅಜ್ಜಿ'.

'ದೇವ್ರು ಇದಕ್ಕೆಲ್ಲಾ ಬಗ್ಗೋದಿಲ್ಲ ಕಣೋ! ಇಷ್ಟೆಲ್ಲಾ ಮಾಡಿದ್ರೂ, ಮಾಡಿದ್ದುಣ್ಣೋ ಮಾರಾಯಾನೇ!'

'ಹೌದಜ್ಜಿ.

'ನನಗೆ ಅನ್ಸುತ್ತೆ. ಒಳ್ಳೇ ರೀತಿ ನೀತೀಲಿ ಸಂಪಾದಿಸಿದ ಹಣದಿಂದ ಬಡವ್ರಿಗೆ ಬೇಕಾದ ಸ್ಕೂಲು, ಆಸ್ಪತ್ರೆಗಳನ್ನು ಕಟ್ಟಿಕೊಟ್ರೆ, ಅಂಥಾವ್ರ ಮೇಲೆ ದೇವ್ರ ಕೃಪೆ ಯಾವಾಗಲೂ ಇರುತ್ತೆ. ಹಾಗೆ ಅವ್ರಿಗೆ ಏನಾದರೂ ಕಷ್ಟ ಕಾಲ ಬಂದ್ರೂ, ಅವ್ರಿಗೆ ತಡ್ಕೊಳ್ಳೋ ಶಕ್ತಿ ದೇವ್ರು ಖಂಡಿತ ಕೊಡ್ತಾನೆ'.

'ಹೌದಜ್ಜಿ.'

'ಮೊನ್ನೆ ನಮ್ಮ ಸಾಫ್ಟ್‌ವೇರ್ ಸೀತಮ್ಮಾ ಹೇಳ್ತಿದ್ರು.... ಅವರ ಲೊಕಾಲಿಟಿಯ ಕಾರ್ಪೊರೇಟರ್ ಒಂದೇ ಸಮ ದುಡ್ಡು ಹೊಡೆದು ಎಕ್ಸಪೋರ್ಟಿಗೆ ಅಂತ ಗಾರ್ಮೆಂಟ್ ಫ್ಯಾಕ್ಟರಿ ಹಾಕಿದ್ನಂತೆ. ಭಾನುವಾರ ರಾತ್ರಿ ಎಲ್ಲೋ ಶಾರ್ಟ್‌ಸರ್ಕ್ಯೂಟೋ ಪರ್ಕ್ಯೂಟೋ ಆಗಿ ಎಲ್ಲಾ ಸುಟ್ಟು ಬೂದಿ ಅಂತೆ. ಎಷ್ಟು ದಕ್ಕುತ್ತೋ ಅಷ್ಟೆ. ಮೋಸ ಮಾಡಿದ್ದು ದಕ್ಕಲ್ಲ ಕಣೋ'.

'ಈಗ ಇರುವ ಸುಮಾರು ರಾಜಕಾರಿಣಿಗಳು ಅನೈತಿಕವಾಗೇ ಸಂಪಾದನೆ ಮಾಡ್ತಾರಲ್ಲಾ ಅಜ್ಜಿ! ಅವ್ರಿಗೆ ದೇವ್ರು ಶಿಕ್ಷೆ ಕೊಡ್ತಾನೇಂತಿಯಾ?'

'ಖಂಡಿತವಾಗಿ! ರಾಜಕಾರಿಣಿಗಳೇಕೆ? ಬೇರೆ ವರ್ಗದವರೂ ಇದಾರಲ್ಲೋ. ಜೈಲು, ಬೈಲು ಅಂತ ಓಡಾಡ್ಕೊಂಡಿದಾರಲ್ಲಾ! ಅವರಿಗೆಲ್ಲಾ ಒಂದಲ್ಲ ಒಂದು ತಲೆ ತಿನ್ನೋ ಪ್ರಾಬ್ಲಂಗಳಿರುತ್ತೆ..... ನಮ್ಮ ಹಾರ್ಡವೇರ್ ಹರಿಣಿ ಹರಿಕಥೆ ಮಧ್ಯೆ ಹೇಳ್ತಿದ್ರು..'

'ಹಾರ್ಡವೇರ್ ಅಂದ್ರೆ ಕೊಳಾಯಿ, ಮರವಜ್ರ, ಪೈಪು ಅಂಗಡಿ ಇಟ್ಟಿರೋವ್ರಲ್ವಾ..?'

'ಹೌದು.. ಮಧ್ಯೆ ಬಾಯ್ಹಾಕ್ಬೇಡ್ವೋ....'

'ಹರಿಣಿ ಏನಂದ್ರಜ್ಜಿ?'

'ಅವ್ರ ಅಂಗಡಿಗೆ ಕಳ್ಳ ಕನ್ನ ಹಾಕಿದ್ನಂತೆ.'

'ಅಯ್ಯೋ! ಎಲ್ಲಾ ಹೋಯ್ತಾ?'

'ಅವ್ರು ಬ್ಯಾಂಕಿಗೆ ಹಾಕಬೇಕೂಂತ ದುಡ್ಡೆಲ್ಲಾ ಸೇಫ್ನಲ್ಲಿಟ್ಟಿದ್ರು. ಮರ್ತು ಬೀಗದಕೈನೂ ಅಲ್ಲೇ ಇಟ್ಟಿದ್ರು. ಆದರೆ ಕಳ್ಳರು ಕೀಗೋಸ್ಕರ ಸಾಮಾನುಗಳನ್ನು ಅಲ್ಲಿ ಇಲ್ಲಿ ಎಸ್ದು ಹುಡುಕೋದ್ರಲ್ಲಿ ಕೀಗೊಂಚಲು ಫುಟ್ರಗ್ ಕೆಳಗೆ ಸೇರಿಕೊಂಡಿತ್ತು! ಕೊನೆಗೆ ಸೇಫ್ ಒಡೆಯಕ್ಕಾಗ್ದೆ ಒಂದೆರೆಡು ಪೈಪ್ ಮಾತ್ರ ಕದ್ಕೊಂಡ್ಹೋದ್ರು. ಯಾಕ್ಹೇಳದೇಂದ್ರೆ.. ಅವರು ಕಷ್ಟಪಟ್ಟು ಸಂಪಾದಿಸಿದ ದುಡ್ಡು ಹೋಗ್ಲಿಲ್ಲ. ದೇವ್ರೇ ಕಾಪಾಡ್ದ.'

'ಹಾಗಾದ್ರೆ ಸ್ಪೈಟ್ ಫಾರ್ವರ್ಡ್ ಮೆಥಡೇ ಸರೀಂತಿಯಾ?'

'ನೂರಕ್ಕೆ ನೂರಾಂಶ ಅದೇ ಸರಿ. ಹಾಲು ಕುಡಿದ ಮಕ್ಕಳೇ ಬದುಕಲ್ಲ, ಇನ್ನು ನೀರು ಕುಡ್ದ ಮಕ್ಕಳು ಬದುಕುತ್ಯೇ?'

'ಅಜ್ಜಿ! ಆದ್ರೂ ನನಗೊಂದೊಂದ್ಸಲ ಅನ್ನುತ್ತೆ.... ಈಗ ನೀರು, ಬೀರು ಕುಡ್ದ ಮಕ್ಕಳೇ ಬದುಕೋದೂ. ಬರೀ ಹಾಲು ಕುಡಿಯೋ ಮಕ್ಕಳು ಬದುಕೋದು ಕಷ್ಟ ಹಾಗೆ ಬದುಕ್ಬೇಕೂಂದ್ರೆ ಅದಕ್ಕೆ ಕಂಪ್ಲಾನ್ನೋ, ಬೂಸ್ಟೋ ಹಾಕ್ಕೋಬೇಕು!'

'ಅಯ್ಯೋ ಮನೆ ಹಾಳ! ಈಗ್ಲಿಂದಾನೇ ಹಾಳಾಗಿದಿಯಲ್ಲೋ.'

✤

---

# ದೇವರು

**ಊದಿದರೆ ಕೊಳಲು, ಮಿಡಿದರೆ ವೀಣೆ, ಅವನೆ ಒಲವು**
**ಅವನೆ ಗಾಯಕ, ಕೇಳುವವ ಅವನೆ**
**ಕೊನೆಯಿರದ ನಾಟಕದ ಸೂತ್ರಧಾರಿಯು ಅವನೆ**
**ಪಾತ್ರವು ಅವನೆ, ಚಪ್ಪಾಳೆ ಅವನೆ**
**ಅನುಭವಗಳಿಂದ ಕಬ್ಬಗಳ ಹೊಸೆಯುವವ ನಾನು**
**ಅರ್ಥವಾಯಿತು ನನಗೆ ಅವನ ಒಲವು**

***ಕೆ.ಎಸ್. ನರಸಿಂಹಸ್ವಾಮಿ***




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ದೇವಾಯಣ

**'ದೇವರು' ವಿಶೇಷ**

**– ಆನಂದ**

**ನಾ**ನೇ ಒಂದು ದೇವರನ್ನು ಮಾಡಬಾರದೇಕೆ ಎಂಬ ಯೋಚನೆ ಅಂದು ಹೋಟೇಲಿನಲ್ಲಿ ಉದ್ದಿನ ವಡೆ ತಿನ್ನುತ್ತಿದ್ದಾಗ ಬಂದಿತು. ಎದುರಿಗೆ ಆಳೆತ್ತರಕ್ಕೆ ನಿಂತಿದ್ದ ರಾಘವೇಂದ್ರ ಸ್ವಾಮಿಗಳು ನನ್ನನ್ನೇ ನೋಡುತ್ತಿರುವಂತೆ ಕಾಣುತ್ತಿತ್ತು.

ಇಷ್ಟೊಂದು ಪಕ್ಷಗಳಿದ್ದರೂ ಹೊಸ ಹೊಸ ಪಕ್ಷಗಳು ಉದಯವಾಗುತ್ತಿರುವಂತೆ 33 ಕೋಟಿ ದೇವತೆಗಳಿದ್ದರೂ – ಅಷ್ಟು ಜನಸಂಖ್ಯೆಯೇ ಇದ್ದಿತು. ಒಮ್ಮೆ ಭಾರತದಲ್ಲಿ – ನನ್ನದೂ ಒಂದು ದೇವರಿರಬಾರದೇಕೆ ಎಂದುಕೊಂಡು ಅದರ ಬಗ್ಗೆ ಯೋಚಿಸತೊಡಗಿದೆ.

ಹೊಸ ದೇವರು ಎಂದ ಮೇಲೆ ಅದು ಒರಿಜಿನಲ್ ದೇವರುಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಂತೆಯೇ ಅಥವಾ ಮಾನವರಂತೆ ಜನಿಸಿ ನಂತರ ದೈವ ಪಟ್ಟಕ್ಕೆ ಏರಿದ ರಾಮ ಕೃಷ್ಣ ಮುಂತಾದವರಂತೆ ಇರಬೇಕೆ?

> **ಹೊಸ ದೇವರೆಂದರೆ ಅದನ್ನು ನಿರ್ಮಿಸಬೇಕೆ? ಸೃಷ್ಟಿಸಬೇಕೆ? ಊಹಿಸುವುದೆ? ಕಲ್ಪಿಸುವುದೆ?**

ಹೊಸ ದೇವರೆಂದರೆ ಅದನ್ನು ನಿರ್ಮಿಸಬೇಕೆ? ಸೃಷ್ಟಿಸಬೇಕೆ? ಊಹಿಸುವುದೆ? ಕಲ್ಪಿಸುವುದೆ? ಆದರೆ ಸೃಷ್ಟಿಯ ಕೆಲಸ ದೇವರದಲ್ಲವೆ? ಹಾಗಿದ್ದಾಗ ದೇವರ ಕೆಲಸವನ್ನು ನಾವು ಮಾಡುವುದೆ? ಆದರೆ ಹೊಸ ದೇವರೆಂದ ಮೇಲೆ ಯಾರಾದರೂ ಸೃಷ್ಟಿಸಬೇಕಲ್ಲವೆ? ಶೂನ್ಯದಿಂದ ದೇವರು ಬರಲು ಇದೇನು ಸಾಯಿಬಾಬ ವಿಭೂತಿಯೆ?

ಹೇಗೋ ಮಾಡಿ ದೇವರನ್ನು ಸೃಷ್ಟಿಸಿದೆವು ಎಂದುಕೊಳ್ಳಿ. ಅದು ಹೆಣ್ಣಾಗಿರಬೇಕೆ? ಗಂಡಾಗಿರಬೇಕೆ? ಅಥವಾ ಅರ್ಧನಾರೀಶ್ವರ? ಎರಡು ಕಣ್ಣು ಎರಡು ಕೈ, ಎರಡು ಕಾಲು ಸಾಕೆ? ಒಂದೇ ತಲೆ ಇರಲೆ? ಅದೂ ಇತ್ಯರ್ಥವಾಯಿತು ಎಂದರೆ ಎಕ್ಸ್‌ಟ್ರಾ ಫಿಟ್ಟಿಂಗ್ಸ್ ಇರಬೇಕೆ? ಅಂದರೆ ಈಶ್ವರನಿಗೆ ಇದ್ದಂತೆ ತಲೆಯ ಮೇಲೆ ಗಂಗೆ, ಕೊರಳಿನಲ್ಲಿ ಹಾವು, ಕೃಷ್ಣನ ಕೈಯಲ್ಲಿ ಚಕ್ರ, ಸರಸ್ವತಿ ಕೈಯಲ್ಲಿ ವೀಣೆ, ಚಾಮುಂಡಿ ಬಳಿ ತ್ರಿಶೂಲ ಇತ್ಯಾದಿ.

ಮತ್ತೆ ಡ್ರೆಸ್? ನಾರು ಮಡಿಯೆ? ಪೀತಾಂಬರವೆ? ಹೆಣ್ಣಾದರೆ ಸುಲಭ ಏಕೆಂದರೆ ಸೀರೆ ಇದ್ದರೆ ಸಾಕು. ಪ್ರತಿ ದೇವತೆಯ ಹಿಂದೆ ಈಗಾಗಲೇ ಒಬ್ಬೊಬ್ಬ ದೇವರಿದ್ದಾನೆ – ಲಕ್ಷ್ಮಿಯ ಹಿಂದೆ ಶ್ರೀಮನ್ನಾರಾಯಣ, ಪಾರ್ವತಿ ಹಿಂದೆ ಈಶ್ವರ, ಸರಸ್ವತಿಯ ಹಿಂದೆ ಬ್ರಹ್ಮ. ಹಾಗಾಗಿ ನಾವೊಂದು ಹೆಣ್ಣು ದೇವತೆಯನ್ನು ನಿರ್ಮಿಸಿದರೆ/ಸೃಷ್ಟಿಸಿದರೆ/ಊಹಿಸಿದರೆ/ಕಲ್ಪಿಸಿದರೆ ಅದರ ಹಿಂದಿರುವ ಗಂಡು ಯಾರಾಗಬೇಕು? ಅದನ್ನು ನಾವೇ ಸೃಷ್ಟಿಸಬೇಕೆ? ಇಲ್ಲದಿದ್ದರೆ ನಮ್ಮ ದೇವತೆ ಸಿಂಗಲ್ ವುಮನ್ ಆಗುತ್ತಾಳೆ. ಎಲ್ಲ ಕಡೆಯೂ ಸಲ್ಲಳು.

ಈ ದೇವತೆಗೆ ಯಾವ ಜವಾಬ್ದಾರಿ ವಹಿಸುವುದು? ಹಣ, ವಿದ್ಯೆ, ಯಶಸ್ಸು ಮುಂತಾದವುಕ್ಕೆಲ್ಲಾ ಖಾತೆವಾರು ದೇವತೆಗಳಿರುವಾಗ ನಮ್ಮದೇ ಆದ ಈ ದೇವತೆಗೆ ಯಾವ ಬಾಬ್ತು ಮೀಸಲಿಡುವುದು? ಈ ದೇವತೆಯ ಕ್ಷೇತ್ರ ವ್ಯಾಪ್ತಿ, ವಾಸಸ್ಥಾನ ಮುಂತಾದವುಗಳನ್ನೆಲ್ಲಾ ನಿರ್ಧರಿಸುವುದು ಹೇಗೆ? ಅದರ ಬಗ್ಗೆ ಕತೆ ಉಪಕತೆ ಹೆಣೆಯುವುದು ಯಾರು?

ಈ ಎಲ್ಲ ಸಮಸ್ಯೆಗಳು ದೈವಾನುಗ್ರಹದಿಂದ ಪರಿಹಾರವಾಯಿತು ಎಂದಿಟ್ಟುಕೊಳ್ಳೋಣ. ಇನ್ನೂ ಒಂದು ಪ್ರಶ್ನೆ ಎದುರಾಗುತ್ತದೆ. ಈ ದೇವತೆಯನ್ನು ಜನರಿಗೆ ಮುಟ್ಟಿಸುವುದು ಹೇಗೆ? ಭಕ್ತಾದಿಗಳನ್ನು ಆಕರ್ಷಿಸುವುದು ಹೇಗೆ? ಪವಾಡಗಳ ಮೂಲಕವೆ? ಎಲ್ಲ ದೇವಾನುದೇವತೆಗಳು ಈಗಾಗಲೇ ಮಾಡಿರುವ ಪವಾಡಗಳೇ ಅದ್ಭುತ. ಅತ್ಯದ್ಭುತ ಪವಾಡಗಳನ್ನು ಮಾಡಿದರೆ ಮಾತ್ರ ನಮ್ಮ ದೇವತೆ ಸಲ್ಲಬಲ್ಲಳು. ಆದರೆ ಈ ಅತ್ಯದ್ಭುತ ಪವಾಡಗಳನ್ನು ಕಲ್ಪಿಸಿಕೊಳ್ಳುವುದಾದರೂ ಹೇಗೆ?

ಎಲ್ಲವೂ ಪರಿಹಾರವಾಗಿ ಒಂದು acceptable ದೇವತೆ ತಯಾರಾಯಿತು ಅಥವಾ ಸೃಷ್ಟಿಯಾಯಿತು ಎಂದುಕೊಳ್ಳಿ ಅದನ್ನು ಒಲಿಸಿಕೊಳ್ಳಲು ಏನೇನು ಮಾಡಬೇಕು? ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ ಇವರಿಗೆ ಸಲ್ಲಿಸುವಂತೆ ಇದಕ್ಕೂ ಹರಕೆ ಸಲ್ಲಿಸಬೇಕೆ? ಆಗ ಈಡಿಯಾದ ಕೃತಿ ಚೌರ್ಯವಾದಂತಾಯಿತು. ಹೊಸದಾಗಿ ಏನೂ ಇಲ್ಲದಲ್ಲಿ 'ಹೊಸ ನೀರು ಹಳೆಯ ಬಾಟಲ್' ಎಂದಾಗುತ್ತದೆ.

ನನ್ನೆಲ್ಲ ಈ ಜಿಜ್ಞಾಸೆಯನ್ನು ನನ್ನ ಮೇಧಾವಿ ಗೆಳೆಯ ಚಂದ್ರಿಯ ಬಳಿ ತೋಡಿಕೊಂಡೆ. ಅವನೂ ತುಸು ಯೋಚಿಸಿ 'ಒಂದು ಹೊಸ ದೇವರ ಅವಶ್ಯಕತೆ ಇದೆ ಖಂಡಿತ' ಎಂದಾಗ ಆಲ್ ಮೇಧಾವೀಸ್ ಥಿಂಕ್ ಅಲೈಕ್ ಎಂಬ ನಾಣ್ನುಡಿ ನೆನಪಿಗೆ ಬಂದಿತು.

'ಯಾರಿಗೆ? ಏಕೆ?' ಎಂದೆ.

'ಮೂಢನಂಬಿಕೆಗಳನ್ನು ಹೊಡೆದೋಡಿಸುವಂತಹ ದೇವರು ಬೇಕೇ ಬೇಕು' ಎಂದ.

ಈಗ ಅದರ ರೂಪುರೇಷೆಗಳನ್ನು ತಯಾರಿಸಲು ಅವನಿಗೇ ಹೇಳಿದ್ದೇನೆ. ಏಕೆಂದರೆ ಅದು ಅವನ ದೇವರು ತಾನೇ?

✤

---

***ದೇವರಿದ್ದಾನೆಯೆ? ಇರುವುದಾದರೆ ಎಲ್ಲಿ?***
***ದೇವನ ರೂಪ ಆಕಾರ ವಾಸನೆಗಳಾವುವು?***
***ಇವೆಲ್ಲ ತರ್ಕ ಕುತರ್ಕಗಳು ಪುಸ್ತಕ ಪಂಡಿತರಿಂಗೆ***
***ಅವನ ಬಳಸಿ ಪಾಮರರು ಉದ್ಧಾರವಾದರೋ ತಿಂಮ***

# ಶ್ರೀನಿವಾಸನ್‌ರ ಸಹಸ್ರಚಂದ್ರದರ್ಶನ

**- ಡಾ. ಡಿ.ವಿ. ಗುರುಪ್ರಸಾದ್**

‘‘**ನಿ**ಮ್ಮತಂದೆಯ ಖಾಸಾ ಗೆಳೆಯ ಶ್ರೀನಿವಾಸನ್‌ರ 80ನೇ ವರ್ಷದ ಹುಟ್ಟುಹಬ್ಬದ ಸಮಾರಂಭಕ್ಕೆ ಕರೆಯಲು ಅವರ ಮಗಳು ಬಂದಿದ್ದಳು’’ ಎಂದು ನನ್ನ ಶ್ರೀಮತಿ ತಿಳಿಸಿದಾಗ, ‘‘ಈ ಹಿಂದೆ ನಮ್ಮ ಜನರಜೀವಿತಾವಧಿ ಕಡಿಮೆ ಇರುತ್ತಿದುದ್ದರಿಂದ, ಅರವತ್ತನೇ ವರ್ಷದ ಶಾಂತಿ, 80ನೇ ವರ್ಷದ ಸಹಸ್ರಚಂದ್ರದರ್ಶನ ತುಂಬಾ ವಿರಳವಾಗಿತ್ತು. ಹೀಗಾಗಿ ಇಂತಹ ಸಮಾರಂಭಗಳನ್ನು ವೈಭವವಾಗಿ ಆಚರಿಸುತ್ತಿದ್ದರು. ಈಗ ಎಲ್ಲರೂ 80-85 ವರ್ಷ ಬದುಕುತ್ತಾರೆ, ಸಮಾರಂಭಕ್ಕೆ ಏಕೆ ಹೋಗಬೇಕು?’’ ಎಂದೆ. ಕೋಪಗೊಂಡ ನನ್ನ ಶ್ರೀಮತಿ, ‘‘ಶ್ರೀನಿವಾಸನ್ ತುಂಬಾ ಒಳ್ಳೆಯ ಜನ. ನಮ್ಮ ಮಗನಿಗೆ ಅವರು ನರ್ಸರಿ ಸೀಟು ಕೊಡಿಸಿದ್ದು ಮರೆತುಬಿಟ್ರಾ. ನಾವು ಸಮಾರಂಭಕ್ಕೆ ಹೋಗಲೇ ಬೇಕು ಹಾಗೂ ಅವರ ಆಶೀರ್ವಾದ ಪಡೆದು ಬರಲೇಬೇಕು’’ ಎಂದು ವಿಟೋ ಹಾಕಿದಳು.

ಸಮಾರಂಭ ನಡೆಯುತ್ತಿದ್ದುದು ಭಾನುವಾರದ ದಿನ. ಒಂದು ಮಠಕ್ಕೆ ಸೇರಿದ ಸಮುದಾಯ ಭವನದಲ್ಲಿ. ಪ್ರತಿ ಭಾನುವಾರದಂದು ನಾನು ನಿಧಾನವಾಗಿ ಏಳುವುದರಿಂದ ಬೆಳಗಿನ ಉಪಹಾರ ಸೇವಿಸುವುದಿಲ್ಲ. ಬದಲಿಗೆ ಬೆಳಿಗ್ಗೆ 11.30ರಿಂದ 12.30ರ ಸಮಯದಲ್ಲಿ ಬ್ರಂಚ್ ಸೇವಿಸುತ್ತೇನೆ. ಬೇಗನೇ ಹೋಗಿ ಹುಟ್ಟುಹಬ್ಬದ ಸಿಹಿ ತಿಂದುಕೊಂಡು ಬರೋಣವೆಂದು ಪತ್ನಿ ಸಮೇತನಾಗಿ ಬೆಳಿಗ್ಗೆ 11.00ಕ್ಕೆ ಮನೆ ಬಿಟ್ಟೆ. ಸಮುದಾಯ ಭವನ ಸೇರುವ ಹೊತ್ತಿಗೆ ಮಧ್ಯಾಹ್ನ 12.30 ಆಗಿತ್ತು. ಹೊಟ್ಟೆಚುರ್ ಎನ್ನುತ್ತಿತ್ತು. ಸಮುದಾಯ ಭವನ ನಾಲ್ಕು ಅಂತಸ್ತಿನದ್ದಾಗಿತ್ತು. ನಾಲ್ಕೂ ಫ್ಲೋರ್‌ಗಳಲ್ಲಿ ಬೇರೆ ಬೇರೆ ಸಮಾರಂಭಗಳು ಏರ್ಪಾಟಾಗಿದ್ದಂತೆ ಕಂಡುಬಂದಿತು. ನಮಗೆ ಆಮಂತ್ರಣವಿತ್ತವರು, ಆಮಂತ್ರಣ ಪತ್ರಿಕೆ ಮುದ್ರಿಸಿರಲಿಲ್ಲ. ಬಾಯಿ ಮಾತಿನಲ್ಲಿ ಸಭೆ ನಡೆಯುವ ಸ್ಥಳವನ್ನಷ್ಟೇ ಹೇಳಿದ್ದರು. ‘‘ಕರೆಕ್ಟಾಗಿ ಯಾವ ಜಾಗದಲ್ಲಿ ಸಮಾರಂಭ ನಡೆಯುತ್ತದೆ ಎಂದು ಕೇಳಬಾರದೇನೆ?’’ ಎಂದು ನನ್ನ ಹೆಂಡತಿಯ ಮೇಲೆ ರೇಗಿದೆ. ‘‘ಇಲ್ಲಿ ನಾಲ್ಕು ಫ್ಲೋರ್‌ಗಳಿವೆ ಎಂದು ನನಗೇನು ಗೊತ್ತಿತ್ತು’’ ಎಂದು ದಬಾಯಿಸಿದಳು. ನಮಿಬ್ಬರ ಸಂಭಾಷಣೆ ಕೇಳಿಸಿಕೊಂಡ ವ್ಯಕ್ತಿಯೊಬ್ಬ ಎಲ್ಲಿಗೆ ಹೋಗಬೇಕು ಎಂದು ಕೇಳಿದ. ಶ್ರೀನಿವಾಸನ್‌ರವರ 80ನೇ ಹುಟ್ಟು ಹಬ್ಬದ ಸಮಾರಂಭಕ್ಕೆ ಎಂದೆವು. ಹೋ! ಹಾಗಾ ಮೂರನೇ ಮಹಡಿಗೆ ಹೋಗಿ ಎಂದ. ಒಹೋ ಮೂರನೇ ಮಹಡಿಯೇ, ಮೊದಲೇ ಮಂಡಿ ನೋವು ಎಂದು ಉದ್ಗರಿಸಿದೆ. ‘‘ಏನೂ ಹೆದರಬೇಡಿ, ಇಲ್ಲಿ ಲಿಫ್ಟ್ ಇದೆ’’ ಎಂದ. ಅವನೇ ಲಿಫ್ಟ್ ಕರೆಗಂಟೆ ಒತ್ತಿ, ಲಿಫ್ಟ್ ಬಂದ ಕೂಡಲೇ ನಮ್ಮನ್ನು ಒಳಗೆ ಕಳಿಸಿ ಒಂದು ಬಟನ್ ಪ್ರೆಸ್ ಮಾಡಿ. ಲಿಫ್ಟ್ ನಿಂತಕಡೆ ಇಳಿಯಿರಿ ಎಂದ.

ಲಿಫ್ಟ್ ನಿಂತು ಬಾಗಿಲು ತೆಗೆದಕೂಡಲೇ ನಾನೂ ಹಾಗೂ ನನ್ನ ಶ್ರೀಮತಿ ಸಮಾರಂಭದ ಹಾಲ್‌ಗೆ ಹೋದೆವು. ಆಗಲೇ ಸ್ಟೇಜ್‌ನತ್ತ ಕಣ್ಣು ಹಾಯಿಸಿದೆ. ಅಲ್ಲಿ ಶ್ರೀನಿವಾಸನ್ ಆಗಲೀ ಅವರ ಕುಟುಂಬದವರಾಗಲೀ ಕಾಣಲಿಲ್ಲ. ಸಾಕಷ್ಟು ಜನ ಊಟಕ್ಕೆ ಕುಳಿತಿದ್ದರು.

ಪರಿಚಯಸ್ತರು ಯಾರೂ ಕಾಣಲಿಲ್ಲವಲ್ಲ ಎಂದು ಪರದಾಡುತ್ತಿದ್ದಾಗ. ಒಬ್ಬ ವ್ಯಕ್ತಿ ಬಂದು, ನಮಸ್ಕಾರ ಬನ್ನಿ ಬನ್ನಿ ಎಂದ. ಅವನ ಮುಖ ಯಾರೋ ನೋಡಿದವರಂತಹ ಮುಖದಂತೆಯೇ ಇತ್ತು. ಈಗ ತಾನೇ ವೇದ ಘೋಷ ಮುಗಿಯಿತು. ಬ್ರಾಹ್ಮಣರ ಊಟ ಆಯಿತು. ಬನ್ನಿ ಊಟಕ್ಕೆ ಕುಳಿತುಕೊಳ್ಳಿ ಎಂದ.

ಅಷ್ಟರಲ್ಲಿ ನನ್ನ ಹೆಂಡತಿ, ''ಇಲ್ಲಿ ಯಾರೂ ನನಗೆ ತಿಳಿದಿರುವ ಹೆಂಗಸರೇ ಕಾಣತ್ತಿಲ್ಲವಲ್ಲ'' ಎಂದಳು. ಅವರು ''ಈಗ ತಾನೇ ರೂಮ್‌ಗೆ ಹೋಗಿರಬೇಕು ಬರುತ್ತಾರೆ'' ಎಂದ. ನಾನು ಮೊಣಕೈಯಿಂದ ನನ್ನ ಹೆಂಡತಿಯನ್ನು ತಿವಿದು ಮೊದಲು ಊಟ ಮಾಡ್ಕೋಣ ಬಾ ಬೆಳಗಿನ ಟಿಫನ್ನೂ ಆಗಿಲ್ಲ. ಹೊಟ್ಟೆ ಹಸಿಯುತ್ತಿದೆ ಎಂದೆ.

ಟೇಬಲ್ ಮುಂದಿದ್ದ ಕುರ್ಚಿಯಲ್ಲಿ ಇಬ್ಬರೂ ಕುಳಿತೆವು. ಘಮ ಘಮಿಸುವ ವಾಸನೆಯುಳ್ಳ ರುಚಿಕರ ಭೋಜನ ಬಡಿಸಿದರು. ರವೆ ಪಾಯಸ ಮಾಡಿದ್ದರು. ಏನ್ ರೀ, ರವೆ ಪಾಯಸ ಮಾಡಿದ್ದಾರೆ ಎಂದು ನನ್ನ ಹೆಂಡತಿ ಉದ್ಗರಿಸಿದಳು. ಇಲ್ಲ, ಇವರ ಸಂಪ್ರದಾಯದಲ್ಲಿ ರವೆ ಪಾಯಸವೇ ಶ್ರೇಷ್ಠ ಎಂದೆ. ಆನಂತರ ಸಿಹಿ ತಿಂಡಿಯಾದ ಸಜ್ಜಪ್ಪ ಮತ್ತು ರವೆ ಉಂಡೆ ಹಲವಾರು ಸಾರಿ ಕೇಳಿ ಬಡಿಸಿ ಸಾಕಷ್ಟು ಹಯಗ್ರೀವವನ್ನೂ ಬಡಿಸಿದರು.

ರುಚಿರುಚಿಯಾದ ಊಟ ಮುಗಿಸುವಷ್ಟರಲ್ಲಿ ತಾಂಬೂಲವನ್ನು ಟೇಬಲ್ ಮೇಲಿಟ್ಟರು. ಎಲೆ ತುದಿಗೆ ರೂ.5/-ರ ನಾಣ್ಯವನ್ನು ಇಟ್ಟರು. ಕೈ ತೊಳೆದುಕೊಂಡು ಜೋರಾಗಿ ತೇಗಿ ವಿಳ್ಯದ ಎಲೆ ಸೇವಿಸುವಾಗ ನನ್ನ ಹೆಂಡತಿ, ನಾವು ಈಗ ಶ್ರೀನಿವಾಸ್‌ರವರನ್ನ ನೋಡಿ ಅವರಿಗಾಗಿ ತಂದ ಶಾಲು, ಗಂಧದ ಹಾರ ಮತ್ತು ಗಿಫ್ಟ್‌ಕೊಟ್ಟು ಆಶೀರ್ವಾದ ಪಡೆದು ಬರೋಣ ಎಂದಳು. ಇಬ್ಬರೂ ಸ್ಟೇಜ್‌ನ ಬಳಿ ಹೋದೆವು. ದಾರಿಯಲ್ಲಿ ಸಿಕ್ಕ ಒಬ್ಬನನ್ನು ಎಲ್ಲಿ ಯಜಮಾನರು ಸ್ಟೇಜ್‌ನ ಮೇಲೆ ಕಾಣುತ್ತಿಲ್ಲವಲ್ಲ ಎಂದೆ.

ಏನ್ ಸಾರ್ ಹೀಗೆ ಹೇಳುತ್ತೀರಿ, ಸ್ಟೇಜ್‌ನ ಮೇಲೆ ಕುರ್ಚಿಯಲ್ಲಿಟ್ಟಿರುವ ಹಾರ ಹಾಕಿರುವ ಫೋಟೋ ನಿಮಗೆ ಕಾಣುತ್ತಿಲ್ಲವೇ ಎಂದ. ಒಂದು ನಿಮಿಷ ಗಾಭರಿಯಾಗಿ ಕನ್ನಡಕ ಹಾಕಿಕೊಂಡು ಫೋಟೋದತ್ತ ನೋಡಿ, ಯಾರಿವರು ಎಂದು ಕೇಳಿದೆ. ಇವರು ನರಸಿಂಹನ್, ಎ.ಜಿ. ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಪಾಪ ಹಾರ್ಟ್‌ಅಟ್ಯಾಕ್ ಆಗಿ ಹೋಗಿಬಿಟ್ಟರು. ಇವತ್ತು ಅವರ ವೈಕುಂಠ ಸಮಾರಾಧನೆ ಎಂದ.

ಏನು ಮಾಡುವುದೆಂದು ತೋಚಲಿಲ್ಲ. ಅಷ್ಟರಲ್ಲಿ ನಮ್ಮನ್ನು ಗುರುತು ಹಿಡಿದ ಊಟ ಬಡಿಸುತ್ತಿದ್ದ ಪರಿಚಾರಕನೊಬ್ಬ, ''ಏನ್ ಸಾರ್ ಚೆನ್ನಾಗಿದ್ದೀರಾ?'' ಎಂದ.

''ನಾನೇನೋ ಚೆನ್ನಾಗಿದ್ದೇನಪ್ಪ. ಆದರೆ ಒಂದು ಆಭಾಸವಾಗಿದೆ. ಶ್ರೀನಿವಾಸನ್‌ರ ಹುಟ್ಟು ಹಬ್ಬದ ಬದಲು, ನರಸಿಂಹನ್‌ರ ವೈಕುಂಠ ಸಮಾರಾಧನೆ ಊಟ ಮಾಡಿಬಿಟ್ಟೆವಲ್ಲ'' ಎಂದೆ.

''ಡೋಂಟ್ ವರಿ ಮಾಡ್ಕೊಬೇಡಿ ಸರ್. ನನ್ನ ಜೊತೆ ಬನ್ನಿ'' ಎಂದು ಲಿಫ್ಟ್‌ನಲ್ಲಿ ಕರೆದುಕೊಂಡು ಹೋದ. ಅಷ್ಟರಲ್ಲಿ ನನ್ನ ಹೆಂಡತಿ ''ನನಗೆ ಮೊದಲೇ ಡೌಟ್ ಬಂತು, ರವೆ

ಪಾಯಸ, ಹಯಗ್ರೀವ, ರವೆ ಉಂಡೆ, ಆಂಬೊಡೆ ತಿಂದಾಗಲೇ ಅನಿಸಿತು'' ಎಂದಳು. ''ಊಟಕ್ಕೆ ಕೂರುವ ಮೊದಲೇ ಯಾಕೆ ಹೇಳಲಿಲ್ಲ'' ಎಂದೆ. ''ನೀವೇ ಮೊದಲು ಎಲೆ ಹಿಡಿದು ಕುಳಿತಿರಲ್ಲಾ, ಮೊದಲೇ ಹಸಿದರೆ ಹುಲಿ. ನೀವು ರೇಗುತ್ತೀರಾ ಅಂತ ಹೇಳಲಿಲ್ಲ'' ಎಂದಳು.

''ಈ ಸಮುದಾಯ ಭವನದಲ್ಲಿ ನಾಲ್ಕು ಹಾಲ್‌ಗಳಿವೆ. ಇವತ್ತು ನಾಲ್ಕೂ ಫುಲ್ ಆಗಿವೆ. ಗ್ರೌಂಡ್ ಫ್ಲೋರ್‌ನಲ್ಲಿ ನಾಮಕರಣ, ಮೊದಲನೇ ಮಹಡಿಯಲ್ಲಿ ಎಂಗೇಜ್‌ಮೆಂಟ್, ಎರಡರಲ್ಲಿ ವೈಕುಂಠ, ಮೂರರಲ್ಲಿ ಸಹಸ್ರಚಂದ್ರದರ್ಶನ, ನಾಲ್ಕರಲ್ಲಿ ಸೀಮಂತ ಎಂದ. ನೋಡಿ ಸಾರ್, ನಮ್ಮಲ್ಲಿ ಕಿಚನ್ ಕಾಮನ್ ಆಗಿದೆ. ನಾವು ಪ್ರತಿದಿನವೂ ಎಲ್ಲರಿಗೂ ಪಲ್ಯ, ಕೋಸಂಬರಿ, ಉಪ್ಪಿನಕಾಯಿ ಹಾಗೂ ಹಯಗ್ರೀವವನ್ನು common ಆಗಿ ತಯಾರು ಮಾಡ್ತೀವಿ'' ಎಂದ ಆ ಪರಿಚಾರಕ.

ಅಷ್ಟರಲ್ಲಿ ಲಿಫ್ಟ್ ಬಂತು ನಮ್ಮನ್ನು ಮೂರನೇ ಮಹಡಿಗೆ ಕರೆದುಕೊಂಡು ಹೋದ. ಆಗತಾನೆ ಕೈ ತೊಳೆದುಕೊಳ್ಳುತ್ತಿದ್ದ ಶ್ರೀನಿವಾಸನ್ ''ಬನ್ನಿ ಬನ್ನಿ ಈಗ ತಾನೆ ಎಲ್ಲರ ಊಟ ಮುಗಿಯಿತು. ಒಂದು ಐದು ನಿಮಿಷ ಕಾಯಬೇಕು'' ಎಂದರು. ''ಪರವಾಗಿಲ್ಲ ಸರ್, ಬೇರೆಕಡೆ ಊಟ ಆಗಿದೆ'' ಎಂದು ಹೇಳಿ ಶಾಲು ಹೊದಿಸಿ, Happy Birthday ಎಂದು ಹೇಳಿ ಹೊರಗೆ ಬಂದೆವು.

ಸಮುದಾಯ ಭವನದ ಕೆಳಕ್ಕೆ ಬಂದಾಗ ನಮ್ಮನ್ನು ಲಿಫ್ಟ್‌ನಲ್ಲಿ ಕಳುಹಿಸಿದವ ಎದುರಾಗಿ ಊಟ ಆಯ್ತಾ ಸಾರ್ ಎಂದ. ಆಯಿತಪ್ಪ ಹುಟ್ಟು ಹಬ್ಬದ ಬದಲು ವೈಕುಂಠ ಸಮಾರಾಧನೆಯ ಊಟವಾಯಿತು ಎಂದೆ. ತಕ್ಷಣ ಸ್ತಂಬೀಭೂತನಾದ ಅವನು ಬೇಗನೆ ಸಾವರಿಸಿಕೊಂಡು ''ಸಾರ್ ನಾನು ಮೂರನೇ ಮಹಡಿಯ ಬಟನ್‌ನನ್ನೇ ಒತ್ತಿದ್ದೆ. ಆದರೆ ಯಾರೋ ಪ್ರಯಾಣಿಕರು ಒಂದನೇ ಅಥವಾ ಎರಡನೇ ಮಹಡಿಯ ಬಟನ್ ಒತ್ತಿರಬೇಕು ಲಿಫ್ಟ್ನಲ್ಲಿ ನಿಂತಾಗ ಎರಡನೇ ಮಹಡಿಯಲ್ಲೇ ಇಳಿದುಬಿಟ್ಟಿರಬೇಕು'' ಎಂದ.

ಅನ್ನದಾತಾ ಸುಖೀಭವ ಎಂದು ಉದ್ಗರಿಸಿ ಆಟೋ ಹಿಡಿಯಲು ಭವನದ ಹೊರಗಡೆ ಬಂದೆವು.

✤

---

## ಬೀಚಿ ಪ್ರಶ್ನೋತ್ತರ

ಪ್ರಶ್ನೆ – ಸ್ವಾಮಿ ದೇವರಿದ್ದಾನೆ ಎಂಬುದು ಜನರ ಒಂದು ಮೂಢ ನಂಬಿಕೆ. ಆದರೆ ದೇವರಿಲ್ಲ ಎಂಬುದರಲ್ಲಿ ನನಗೆ ಸಂಶಯವಿಲ್ಲ ನಿಮ್ಮ ಉತ್ತರ ಏನು ಹೇಳಿ?

ಉತ್ತರ – ನಿಮ್ಮ ಅಭಿಪ್ರಾಯದಿಂದ ಕೆಲವರಿಗೆ ಕೋಪ ಬರಬಹುದು, ಆದರೆ ದೇವರಿಗೆ ನಿಮ್ಮ ಮೇಲೆ ಕೋಪವಿಲ್ಲ, ದಡ್ಡ ಮಕ್ಕಳ ಮೇಲೇ ತಾಯಿಗೆ ಪ್ರೀತಿ ಹೆಚ್ಚು

## STATEMENT OF OWNERSHIP OF APARANJI (KANNADA MONTHLY) (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Nath |
| | Nationality | : | Indian |
| | Address | : | Ravi Graphics<br>49, 4th Cross. SSI Area<br>Rajaji Nagar<br>Bangalore -560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore- 560003 |
| 5. | Editor's Name | : | M.ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore 560003 |
| 6. | Name and address of Individuals who own the Paper | | Koravanji Aparanji Trust<br>36, 6th Main Road<br>Malleswaram<br>Bangalore 560003 |

I M. Shivakumar hereby declare that the particulars given above are true to the best of my knowledge and belief.

1-3-2013 **M. ShivaKumar**

Bangalore (Signature of the Publisher)